(Estd : 1905)

# THE BANGALORE GAYANA SAMAJA (R)

Sri Krishnarajendra Road, Bangalore - 560 004.

## NOTICE :

NOTICE : Notice is hereby given that the 119th Annual General Body Meeting of The Bangalore Gayana Samaja for the year 2023-24 is convened to be held on Sunday the 29th December 2024 at 10.00 A.M. at The Samaja Auditorium, Krishnarajendra Road, Bangalore - 560 004 to transact the following agenda.

## AGENDA:

1. To read and record the notice of the Meeting.
2. Welcome address by the President.
3. To read and record the proceedings of the General Body Meeting held on 17-12-2023.
4. To consider and adopt the report of the Secretary for the period 2023-24.
5. To adopt the Audited Statements of Accounts and Balance sheet for the year 2023-24.
6. Adoption of the Budget Estimates for the year 2024-2025.
7. Appointment of Auditor to audit the books of Accounts of The Samaja for the year 2024-2025 and to fix the honorarium.
8. Consideration of resolutions if any not affecting the rules of The Samaja received by the Hon. Secretary on or before 19-12-2024.
9. Any other matter with the permission of the Chair.
10. Vote of Thanks

By order of the Managing Committee
K. Nagaraj
Hon. Secretary

Date : 19-11-2024

NOTE : 1) Please bring your Membership ID Card

2) Members can collect copy of the Secretary's Reports and Accounts during working hours from the office after 20-12-2024.

3) Breakfast will be served from 9 am to 10.30 am

# ಬೆಂಗಳೂರು ಗಾಯನ ಸಮಾಜ (ರಿ)

**ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು-560 004.**

## 54ನೇ ಸಂಗೀತ ಸಮ್ಮೇಳನ ಅಭಿನಂದನಾ ಪತ್ರ



**ವಿದ್ವಾನ್. ಮಧೂರು ಪಿ. ಬಾಲಸುಬ್ರಹ್ಮಣ್ಯಂ**

ಮಾನ್ಯರೆ,

ದಿನಾಂಕ: 28–11–1951 ರಂದು ಶ್ರೀಮತಿ. ಭಾಗೀರಥಿ ಮತ್ತು ಶ್ರೀ. ನಾರಾಯಣ ಪಾಲ್ಯತ್ತಾಯ ದಂಪತಿಗಳಿಗೆ ಹಿರಿಯ ಸುಪುತ್ರರಾಗಿ ಕಾಸರಗೂಡಿನ ಮಧೂರಿನಲ್ಲಿ ಜನಿಸಿದಿರಿ. ತಮ್ಮ ತಂದೆ ನಾರಾಯಣ ಪಾಲ್ಯತ್ತಾಯ ಭಜನಾ ತಂಡಗಳಿಗೆ ಖಂಜೀರ ನುಡಿಸುತ್ತಿದ್ದರು. ತಮಗೆ ಬಾಲ್ಯದಲ್ಲಿ ಸಂಗೀತ ಪಾಠ ಹೇಳಿದವರು ಚೆಂಬೈ ವೈದ್ಯನಾಥ ಭಾಗವತರ ಶಿಷ್ಯರಾದ ಪಡುಬಿದ್ರೆ ಸುಬ್ರಾಯಮಾಣಿ ಭಾಗವತರು. ಪ್ರೌಢ ಪಾಠವನ್ನು ಬೋಧಿಸಿದವರು ಚಕ್ರಕೋಡಿ ನಾರಾಯಣ ಶಾಸ್ತ್ರಿ ಮತ್ತು ಜಿ.ಎನ್. ಬಾಲಸುಬ್ರಮಣ್ಯಂ ಅವರ ಶಿಷ್ಯರಾದ ವಿದ್ವಾನ್. ಕಾಂಚನ ವೆಂಕಟಸುಬ್ರಹ್ಮಣ್ಯ ಅಯ್ಯರ್ ಅವರು. ಪುತ್ತೂರು ತಾಲ್ಲೂಕಿನ ಉಪ್ಪಿನಗಂಡಿಯ ಸಮೀಪದ ಕಾಂಚನದಲ್ಲಿ ಸಂಗೀತಾಭ್ಯಾಸಿಗಳಿಗೆ ಅನ್ನ, ವಸ್ತ್ರವನ್ನಿತ್ತು ಸಂಗೀತ ಕಲಿಸುತ್ತಿದ್ದ ಗುರುಕುಲದಲ್ಲಿ ತಮ್ಮ ವಿಧ್ಯಾಭ್ಯಾಸ. ಋಷಿ ಸದೃಶ ವ್ಯಕ್ತಿತ್ವದ ಕಾಂಚನ ವೆಂಕಟಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯತ್ವದಲ್ಲಿ ಸಂಗೀತ ಶಿಕ್ಷಣದ ಜೊತೆಗೆ ಮಾನವೀಯ ಗುಣಗಳನ್ನು ಪಡೆದಿರಿ. ನಂತರದಲ್ಲಿ ತಾವು ಶ್ರದ್ಧೆ, ನಿಷ್ಠೆಗಳಿಂದ ಸಂಗೀತಾಭ್ಯಾಸ ಮಾಡಿ ಇಬ್ಬರೂ ಗುರುಗಳ ಮೆಚ್ಚಿಗೆ ಪಡೆದು ಅನೇಕ ಹಿರಿಯ ಸಂಗೀತ ಕಲಾವಿದರ ಗಾಯನವನ್ನು ಕೇಳುವುದರ ಮೂಲಕ ತಮ್ಮ ಅನುಭವವನ್ನು ಹೆಚ್ಚು ಮಾಡಿಕೊಂಡಿರಿ.

ಸಂಗೀತವನ್ನೇ ಜೀವನೋಪಾಯವಾಗಿ ಆರಿಸಿಕೊಂಡವರು ತಾವು. ಇಂದಿಗೂ ಸಂಗೀತವನ್ನೇ ಉಸಿರಾಗಿಸಿಕೊಂಡ ತಮಗೆ ಸಂಗೀತದಲ್ಲೇ ಬದುಕಬೇಕೆಂಬ ಛಲ ಬಾಲ್ಯದಿಂದಲೇ ಇತ್ತು. ಕೊಪ್ಪ ತಾಲ್ಲೂಕಿನ ಹರಿಹರ ಪುರದಲ್ಲಿ ನಡೆದುಕೊಂಡೆ ಮನೆ ಮನೆಗೆ ಹೋಗಿ ಪಾಠ ಹೇಳುವ, ಸಂಗೀತ ಕಲಿಸುವ ಪದ್ಧತಿಯನ್ನು ಆಯ್ದುಕೊಂಡಿರಿ. ಇಡೀ ಊರಿನಲ್ಲಿ ಒಂದು ಸಂಗೀತದ ಪರಿಸರ ಸೃಷ್ಟಿಯಾಯಿತು ಎಂದರೆ ತಪ್ಪಿಲ್ಲ. ತಮ್ಮ ಗುರುಗಳಂತೆ ತಾವು ಸಹ ಆರ್ಥಿಕ ಶ್ರೀಮಂತಿಕೆಯನ್ನು ಹೊಂದಿರಲಿಲ್ಲ. ಮನೆ ಪಾಠಕ್ಕಾಗಿ ಶಿವಮೊಗ್ಗದವರಿಗೂ ಹೋಗಿರುವುದು ತಾವು ಸಂಗೀತ ಕ್ಷೇತ್ರಕ್ಕೆ ನೀಡಿರುವ ದೊಡ್ಡ ಕೊಡುಗೆ. ದಿನಕ್ಕೆ ಹದಿನೈದರಿಂದ ಇಪ್ಪತ್ತು ಕಿಲೋಮೀಟರ್ ವರೆಗೂ ಕಾಲ್ನಡಿಗೆಯಲ್ಲಿ ಸಂಗೀತ ಯಾತ್ರಿಕರಾಗಿ ಮನೆಗೆ ಮನೆಗೆ ಸಂಗೀತ ಪಾಠ ಮಾಡಿದ ತಮ್ಮ ಸಂಗೀತ ಸೇವೆ ಶ್ಲಾಘನೀಯ.

ತಮ್ಮ ಪ್ರತಿಭೆಯನ್ನು ಮತ್ತು ಶ್ರದ್ಧೆಯನ್ನು ಗಮನಿಸಿ ಉಡುಪಿಯ ಅಕಾಡೆಮಿ ಆಫ್ ಜನರಲ್ ಎಜುಕೇಷನ್‌ನ ಸಂಗೀತ ಶಾಲೆಯ ಸಂಗೀತ ಶಿಕ್ಷಕರಾಗಿ 1982 ರಲ್ಲಿ ನಿಯುಕ್ತರಾದಿರಿ. ಈ ಶಾಲೆಯ ಮೂಲಕ ತಾವು ಸಾವಿರಾರು ವಿದ್ಯಾರ್ಥಿಗಳನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ್ದೀರಿ. ತಮ್ಮ ಸಂಗೀತ ಪ್ರೀತಿ, ಜೀವನ ಪ್ರೀತಿ ಎಲ್ಲಕ್ಕಿಂತ ಕಲಿಯುವ ವಿದ್ಯಾರ್ಥಿಗಳ ಮೇಲಿಟ್ಟಿರುವ ನಂಬಿಕೆ ಗೌರವವನ್ನು ನೋಡಿ ಅಚ್ಚರಿಯಾಗುತ್ತದೆ. ತಮ್ಮ ಸಮಯ ಪ್ರಜ್ಞೆ, ಕರ್ತವ್ಯ ಪ್ರಜ್ಞೆ ಅನುಕರಣೀಯ. ಆಸಕ್ತಿಯಿಂದ ಕಲಿಯುವವರಿಗೆ ತಾವು ಯಾವ ತ್ಯಾಗಕ್ಕೂ ಸಿದ್ಧ. ತಾವು ಯಾವತ್ತೂ ಸಾರ್ವಜನಿಕರಾಗಿ ಹಚ್ಚಿಕೊಂಡವರಲ್ಲ ಹಾಗೂ ಪ್ರಚಾರ ಬಯಸಿದವರಲ್ಲ. ಸಹಕಲಾವಿದರ ಬಗ್ಗೆ ತಾವು ತೋರಿಸುವ ಗೌರವ ಮೆಚ್ಚತಕ್ಕದ್ದು. ಸಂಗೀತದಲ್ಲಿ ತಮ್ಮದೇ ಆದ ಶೈಲಿಯನ್ನು – ಮಧೂರು ಬಾಣಿಯನ್ನು ಬೆಳೆಸಿಕೊಂಡಿದ್ದೀರಿ.

ತಾವು ವಾಗ್ಗೇಯಕಾರರು ಹೌದು. ಅನೇಕ ಕೃತಿಗಳನ್ನು ರಚಿಸಿದ್ದೀರಿ. ಅದಕ್ಕನುಗುಣವಾಗಿ ಸ್ವರಗಳನ್ನು ಹಾಕಿ ಹಾಡಿದ್ದೀರಿ, ಹಾಡಿಸಿದ್ದೀರಿ. ತಾವು ಲೇಖಕರು ಹೌದು. ಎಲ್ಲರ ಉಪಯೋಗಕ್ಕಾಗಿ ಎರಡು ಕೃತಿಗಳನ್ನು ರಚಿಸಿದ್ದೀರಿ. "ತ್ಯಾಗರಾಜ ಘನ ಪಂಚರತ್ನ ಕೀರ್ತನೆಗಳು" (ಪ್ರತಿ ಪದಾರ್ಥ – ಸ್ವರ ಪ್ರಸ್ತಾರ–ತಾತ್ಪರ್ಯ ಸಹಿತ) ಪ್ರಕಟಗೊಂಡಿದೆ. ತಮ್ಮ ಎರಡನೇಯ ಕೃತಿ "ಸಂಗೀತ ಪ್ರಭೋದಿನಿ ಮಾಲಿಕೆ" ಕರ್ನಾಟಕ ಶಾಸ್ತ್ರಿಯ ಸಂಗೀತದ ಪ್ರಾಥಮಿಕ ಹಂತದ ಕಲಿಕೆಗಾಗಿ ಇರುವ ಕೃತಿ.

ತಮ್ಮ ಪ್ರತಿಬೆಯನ್ನು ಗುರುತಿಸಿ ಅನೇಕ ಸಂಘ, ಸಂಸ್ಥೆಗಳು ಗೌರವಿಸಿದೆ. ಕರ್ನಾಟಕ ಸರ್ಕಾರದ ಸಂಗೀತ ನೃತ್ಯ ಅಕಾಡೆಮಿಯ "ಕಲಾಶ್ರೀ" ಪ್ರಶಸ್ತಿ ದೊರಕಿದೆ. ಉಡುಪಿಯ ಪ್ರದೇಶಕ್ಕೆ ಒಂದು ಖಚಿತವಾದ ಹೃದ್ಯವಾದ ಮತ್ತು ಗಟ್ಟಿಯಾದ ಸಂಗೀತ ಶೈಲಿಯನ್ನು ಕೊಟ್ಟು ನೂರಾರು ಮಂದಿ ಶಿಷ್ಯರನ್ನು ತಯಾರು ಮಾಡಿರುವ ತಾವು ಅಭಿನಂದನೀಯರು

ನಮ್ಮ ನಾಡಿನ ಶ್ರೇಷ್ಠ ಕಲಾವಿದರು, ಸಹೃದಯಿಗಳಾದ ತಮಗೆ ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷರು, ಸದಸ್ಯರೂ ದಿನಾಂಕ: 10.11.2024, ಭಾನುವಾರದಂದು ನಡೆದ ಐವತ್ತನಾಲ್ಕನೇ ಸಂಗೀತ ಸಮ್ಮೇಳನದ ವಿದ್ವತ್ ಸದಸ್‌ನಲ್ಲಿ

**"ಕರ್ನಾಟಕ ಕಲಾಚಾರ್ಯ"** ಎಂಬ ಬಿರುದನ್ನು ನೀಡಿ ಗೌರವಿಸುತ್ತಿದ್ದೇವೆ.

**ಬೆಂಗಳೂರು ಗಾಯನ ಸಮಾಜದ ಪರವಾಗಿ**

**ಶ್ರೀ ಕ್ರೋಧಿನಾಮ ಸಂವತ್ಸರ ಕಾರ್ತಿಕ ಬಹುಳ ನವಮಿ**
**ದಿನಾಂಕ: 10 ನವೆಂಬರ್ 2024**

**ಡಾ॥ ಎಂ.ಆರ್. ವಿ. ಪ್ರಸಾದ್, ಅಧ್ಯಕ್ಷರು**

# ಬೆಂಗಳೂರು ಗಾಯನ ಸಮಾಜ (ರಿ)

**ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು–560 004.**

## 54ನೇ ಸಂಗೀತ ಸಮ್ಮೇಳನ ಅಭಿನಂದನಾ ಪತ್ರ



ಪ್ರೊ ॥ ಎಸ್.ಸಿ. ಶರ್ಮ

**ಪ್ರೊ॥ ಎಸ್.ಸಿ. ಶರ್ಮ**, ಇವರು, ಖ್ಯಾತ ಶಿಕ್ಷಣ ತಜ್ಞರು, ಆಡಳಿತಜ್ಞರು ಮಾತ್ರವಲ್ಲದೆ, ಕರ್ನಾಟಕ ಶಾಸ್ತ್ರೀಯ ಸಂಗೀತದ ಸಂಗೀತಗಾರರಾಗಿ ಹಾಗೂ ಸಂಗೀತಜ್ಞರಾಗಿಯೂ ಸಾಧನೆಗೈದಿದ್ದಾರೆ. ಬಾಲ್ಯದಿಂದಲೂ **ಪ್ರೊ॥ ಎಸ್.ಸಿ. ಶರ್ಮ** ಇವರು **ಪದ್ಮವಿಭೂಷಣ ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್** ಅವರ ಸಂಗೀತ ಶೈಲಿಗೆ ಪ್ರಭಾವಿತರಾಗಿ ಅವರ ಶಿಷ್ಯರಾಗಿ ಶ್ರೀ ಎಂ.ಎಸ್. ರಾಮರಾವ್, ಶ್ರೀಮತಿ ಡಿ. ಶಶಿಕಲ ಇವರ ಬಳಿ ಶಿಷ್ಯರಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನವನ್ನು ಕಲಿತದ್ದು ಮಾತ್ರವಲ್ಲದೆ ಶ್ರೀ ಆರ್.ಆರ್. ಕೇಶವ ಮೂರ್ತಿ ಇವರ ಬಳಿ ಪಿಟೀಲು ವಾದನವನ್ನೂ ಸಹ ಕಲಿತಿರುತ್ತಾರೆ.

ಅವಿನಾಶಿಲಿಂಗಂ ಯೂನಿವರ್ಸಿಟಿ ಫಾರ್ ವುಮೆನ್, ಕೊಯಂಬತ್ತೂರು, ತಮಿಳುನಾಡು, (ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ, ಭಾರತ ಸರ್ಕಾರ, ಇದರಿಂದ ಅನುದಾನಿತ), ಇದರಿಂದ ಆಂಗ್ಲ ಭಾಷೆಯ ಸಂಶೋಧನಾ ಪ್ರಬಂಧ 'Contribution of Padmavibhushan D.K. Pattammal to Carnatic Music–A Critical Appreciation' ಮಂಡಿಸಿ **ಡಿ.ಲಿಟ್ ಪದವಿಯನ್ನು ಜುಲೈ 2007**ರಲ್ಲಿ ಪಡೆದಿರುತ್ತಾರೆ. **ಪ್ರೊ॥ ಎಸ್.ಸಿ. ಶರ್ಮ ಇವರು ಕರ್ನಾಟಕ ಶಾಸ್ತ್ರೀಯ ಗಾಯನದ ಸಂಗೀತಗಾರರಾಗಿ, ಸಂಗೀತಜ್ಞರಾಗಿ ಸಂಗೀತಶಾಸ್ತ್ರದಲ್ಲಿನ ಸಂಶೋಧನೆ ಒಳಗೊಂಡಂತೆ ಸಮಗ್ರ ಸಂಶೋಧನಾ ಕಾರ್ಯಸಾಧನೆ ಮತ್ತು ಸಂಶೋಧನೆಯಲ್ಲಿ ವೃತ್ತಿಪರತೆಯನ್ನು ಸಾಧಿಸಿರುತ್ತಾರೆ.**

**ಪ್ರೊ॥ ಎಸ್.ಸಿ. ಶರ್ಮ** ಇವರ ಸಂಗೀತದಲ್ಲಿನ ಸಂಶೋಧನಾ ಕಾರ್ಯ ಒಳಗೊಂಡಂತೆ ಸಮಗ್ರ ಸಂಶೋಧನಾ ಕಾರ್ಯಕ್ಕೆ ಕರ್ನಾಟಕ ಸರ್ಕಾರದಿಂದ ಪ್ರತಿಷ್ಠಿತ **'ಕರ್ನಾಟಕ ರಾಜ್ಯೋತ್ಸವ'** ಪ್ರಶಸ್ತಿಯನ್ನು 1995ರಲ್ಲಿ, 29ನೇ ಜನವರಿ 1997ರಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ಸರ್ಕಾರದಿಂದ ಸಂಗೀತದ **'ಕಲಾಶಾಸ್ತ್ರ'** ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ 1996–97 ಸಾಲಿಗೆ **'ಕರ್ನಾಟಕ ಕಲಾಶ್ರೀ ಪ್ರಶಸ್ತಿ'**ಯನ್ನು, 31–10–1999ರಲ್ಲಿ **ಬೆಂಗಳೂರು ಗಾಯನ ಸಮಾಜ**ದ 31ನೇ ಸಂಗೀತ ಸಮ್ಮೇಳನದ ವಿದ್ವತ್ ಸಭೆಯಲ್ಲಿ ಕರ್ನಾಟಕ ಸಂಗೀತದಲ್ಲಿನ ಸಂಶೋಧನೆಯನ್ನು ಪರಿಗಣಿಸಿ **'ವರ್ಷದ ವ್ಯಕ್ತಿ–1999'** ಪ್ರಶಸ್ತಿಯನ್ನು, 28–12–2001ರಂದು ಕರ್ನಾಟಕ ಗಾನಕಲಾ ಪರಿಷತ್‌ನ ವತಿಯಿಂದ **'ಗಾನಕಲಾಶ್ರೀ'** ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಗಿರುತ್ತದೆ. ಕಂಚಿ ಕಾಮಕೋಟಿ ಪೀಠ ಮಹಾಸಂಸ್ಥಾನವು 11–8–2012ರಂದು **'ಶ್ರೀ ಕಂಚಿ ಕಾಮಕೋಟಿ ಪೀಠಂ ಆಸ್ಥಾನ ವಿದ್ವಾನ್'**, ಎಂಬ ಬಿರುದನ್ನು ಹಾಗೂ ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಪ್ರತಿಷ್ಠಾನವು 12ನೇ ವಾರ್ಷಿಕ ಸಂಗೀತೋತ್ಸವದಲ್ಲಿ **'ನಾಚಾರಮ್ಮ ಪ್ರಶಸ್ತಿ'** ನೀಡಿ **'ಗಾನಕಲಾ ಸ್ಪರ್ಶಮಣಿ'** ಎಂಬ ಬಿರುದಾಂಕಿತವನ್ನು ಪ್ರದಾನ ಮಾಡಲಾಗಿರುತ್ತದೆ.

**ಪ್ರೊ॥ ಎಸ್.ಸಿ.ಶರ್ಮ** ಇವರು ಹಲವು ವಾರಪತ್ರಿಕೆ, ಪಾಕ್ಷಿಕಗಳಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ವಾಗ್ಗೇಯಕಾರರು, ಸಾಧಕರು, ಹರಿದಾಸ ಸಾಹಿತ್ಯ ಪರಂಪರೆ, ಅವುಗಳ ಆಂತರ್ಯ ಕುರಿತು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ 25ಕ್ಕೂ ಹೆಚ್ಚು ಹಲವಾರು ವಿದ್ವತ್ಪೂರ್ಣ, ಲೇಖನಗಳನ್ನು ಅನನ್ಯ–ಕಲಾಸಿಂಚನ, ತಿಲ್ಲಾನ, ಸಾಮಗಾನ ಮತ್ತು ಯುನಿವರ್ಸಿಟಿ ನ್ಯೂಸ್ ಜರ್ನಲ್, ನವದೆಹಲಿ, ಇದರಲ್ಲಿ ಪ್ರೌಢ ಪ್ರಬಂಧಗಳನ್ನು ಮಂಡಿಸಿರುತ್ತಾರೆ. **'ಗಾಯನ ಸಾಮ್ರಾಜ್ಯ'** ಹಾಗೂ ಇತರೆ ಸಂಗೀತ ಮಾಸ ಪತ್ರಿಕೆಗಳಲ್ಲಿ 20ಕ್ಕೂ ಹೆಚ್ಚು ವಿದ್ವತ್ಪೂರ್ಣ, ವಿಶ್ಲೇಷಣಾತ್ಮಕ ಹಾಗೂ ಸಂಗ್ರಹಯೋಗ್ಯ ಲೇಖನಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಸ್ತುತಪಡಿಸಿರುತ್ತಾರೆ.

ಶ್ರೀಯುತರು ವಿಶ್ವವಿಖ್ಯಾತ ಮೈಸೂರು ದಸರಾ, ಮಾಂಡೋ ಉತ್ಸವ, ಮಧ್ಯಪ್ರದೇಶ, ಮುಂತಾದ ವೇದಿಕೆಗಳಲ್ಲಿ ಕರ್ನಾಟಕ ಸಂಗೀತ ಕಚೇರಿಯನ್ನು ನಡೆಸಿರುವುದಲ್ಲದೆ, **ಬೆಂಗಳೂರು ಗಾಯನ ಸಮಾಜ**ದಲ್ಲಿ 28–10–2010ರಂದು ನಡೆದ ಸಂಗೀತ ಸಮ್ಮೇಳನದಲ್ಲಿ **'ಶ್ರೀ ಮುತ್ತುಸ್ವಾಮಿ ದೀಕ್ಷಿತರ ಪಂಚಭೂತ ಕೃತಿಗಳು'** ಇದರ ಬಗ್ಗೆ ಉಪನ್ಯಾಸ–ಪ್ರಾತ್ಯಕ್ಷಿಕೆಯನ್ನು, 3–11–2012ರಂದು ಇಲ್ಲಿಯೇ ನಡೆದ 44ನೇ ಸಂಗೀತ ಸಮ್ಮೇಳನದ ವಿದ್ವತ್ ಸಭೆಯಲ್ಲಿ **'ವಿದುಷಿ ಟಿ. ಬೃಂದಾ: ಜೀವನ ಮತ್ತು ಸಾಧನೆಗಳು ಹಾಗೂ ಅವರ ಪದ ಮತ್ತು ಜಾವಳಿ ಶೈಲಿ'** ಎಂಬ ವಿಷಯವಾಗಿ ಉಪನ್ಯಾಸ–ಪ್ರಾತ್ಯಕ್ಷಿಕೆಯನ್ನು ಹಾಗೂ 22–10–2018ರಂದು ಇದೇ ವೇದಿಕೆಯಲ್ಲಿ ನಡೆದ 49ನೇ ಸಂಗೀತ ಸಮ್ಮೇಳನದ ಸಂದರ್ಭದಲ್ಲಿ ಹಾಗೂ **'ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್ ಹಾಗೂ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಜನ್ಮ ಶತಮಾನೋತ್ಸವ'** ಇವರ ಸ್ಮರಣಾರ್ಥ **'ಗಾನಪುಷ್ಪಮಾಲಿಕ ಸಮರ್ಪಣಂ'** ಕಾರ್ಯಕ್ರಮದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ–ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿರುತ್ತಾರೆ. ಶ್ರೀ ರಾಮ ನವಮಿ ಸಂಗೀತೋತ್ಸವ, ಶೇಷಾದ್ರಿಪುರಂ, ದಿನಾಂಕ 15–6–2024ರಂದು ಗಿರಿನಗರ ಸಂಗೀತ ಸಭಾ, ಬೆಂಗಳೂರು, ಬೆಂಗಳೂರು ಗಾಯನ ಸಮಾಜ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿಯನ್ನು ನಡೆಸಿಕೊಟ್ಟಿರುತ್ತಾರೆ.

ನಮ್ಮ ನಾಡಿನ ಶ್ರೇಷ್ಠ ಕಲಾವಿದರು, ಸಹೃದಯಿಗಳಾದ ತಮಗೆ ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷರು, ಸದಸ್ಯರೂ ದಿನಾಂಕ: 10.11.2024, ಭಾನುವಾರದಂದು ನಡೆದ ಐವತ್ತನಾಲ್ಕನೇ ಸಂಗೀತ ಸಮ್ಮೇಳನದ ವಿದ್ವತ್ ಸದಸ್‌ನಲ್ಲಿ

**"ಸಂಗೀತ ಕಲಾರತ್ನ" ಎಂಬ ಬಿರುದನ್ನು ನೀಡಿ ಗೌರವಿಸುತ್ತಿದ್ದೇವೆ.**

ಬೆಂಗಳೂರು ಗಾಯನ ಸಮಾಜದ ಪರವಾಗಿ

ಶ್ರೀ ಕ್ರೋಧಿನಾಮ ಸಂವತ್ಸರ ಕಾರ್ತಿಕ ಬಹುಳ ನವಮಿ ದಿನಾಂಕ: 10 ನವೆಂಬರ್ 2024

ಡಾ॥ ಎಂ.ಆರ್. ವಿ. ಪ್ರಸಾದ್, ಅಧ್ಯಕ್ಷರು

# ಬೆಂಗಳೂರು ಗಾಯನ ಸಮಾಜ

ಕೃಷ್ಣರಾಜೇಂದ್ರರಸ್ತೆ, ಬೆಂಗಳೂರು–560 004.

## 54ನೇಯ ಸಂಗೀತ ಸಮ್ಮೇಳನದ ಸಮ್ಮೇಳನಾಧ್ಯಕ್ಷರ ಭಾಷಣ

## ಅಧ್ಯಕ್ಷ ಭಾಷಣ

ಇಂದು ಈ ಸಭೆಯಲ್ಲಿ ಉಪಸ್ಥಿತರಿರುವ ಎಲ್ಲ ವಿದ್ವಾಂಸರಿಗೂ, ಗಾಯನಸಮಾಜದ ಅಧ್ಯಕ್ಷರಾದ ಡಾ॥ ಎಂ. ಆರ್. ವಿ. ಪ್ರಸಾದ್ ಅವರಿಗೂ, ಉಪಾಧ್ಯಕ್ಷರಾದ ಶ್ರೀ. ಟಿ. ಅಚ್ಯುತರಾವ್ ಪದಕಿ ಅವರಿಗೂ, ಗೌರವ ಕಾರ್ಯದರ್ಶಿಗಳಾದ ಕೆ. ನಾಗರಾಜ್ ಅವರಿಗೂ ನನ್ನ ವಿನಯಪೂರ್ವಕ ನಮಸ್ಕಾರಗಳು. ಈ ಬಾರಿಯ 54ನೆಯ ವಾರ್ಷಿಕ ಸಂಗೀತ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷತೆ ವಹಿಸಲು ಆಹ್ವಾನಿಸಿರುವುದಕ್ಕೆ ಹಾಗೂ ಸಂಗೀತಕಲಾರತ್ನ ಪ್ರಶಸ್ತಿಗೆ ಭಾಜನನನ್ನಾಗಿ ಮಾಡಿರುವುದಕ್ಕೆ ಗಾಯನ ಸಮಾಜದ ಎಲ್ಲಾ ಪದಾಧಿಕಾರಿಗಳಿಗೂ, ವಿದ್ವಾಂಸರಿಗೂ ನನ್ನ ಕೃತಜ್ಞತೆಗಳನ್ನು ತಿಳಿಸಲು ಬಯಸುತ್ತೇನೆ. ಸಂಗೀತದ ಸೇವೆಯಲ್ಲಿ ಸಕ್ರಿಯವಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿರುವ ಅತ್ಯಂತ ಸುದೀರ್ಘ ಇತಿಹಾಸವನ್ನು ಹೊಂದಿರುವ ಗಾಯನಸಮಾಜವು ಸಂಗೀತದ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಬಹುತೇಕ ಹಿರಿಯ ವಿದ್ವಾಂಸರು, ಸಂಗೀತ ತಜ್ಞರು ಇಲ್ಲಿ ಕಛೇರಿಗಳನ್ನು ನಡೆಸಿರುತ್ತಾರೆ ಹಾಗೂ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿರುತ್ತಾರೆ. ಇದು ಗಾಯನಸಮಾಜದ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಿದೆ. ವಿದ್ವಾಂಸರಿಗೆ ವೇದಿಕೆ ಮಾತ್ರವಾಗಿರದೆ ಕಲಾರಸಿಕರಿಗೆ ಕಲೆಯ ಅನುಭವದ ಹಂದರವನ್ನು ಕಟ್ಟಿಕೊಡುವಲ್ಲಿ ಈ ಸಂಸ್ಥೆಯ ಪಾತ್ರ ಹಿರಿದಾದುದಾಗಿದೆ.

ಕರ್ನಾಟಕ ರಾಜ್ಯದ ಅತ್ಯಂತ ಮುಂಚೂಣಿಯ ಶಾಸ್ತ್ರೀಯ ಸಂಗೀತ ಸಭೆಗಳಲ್ಲೊಂದಾದ ಗಾಯನ ಸಮಾಜವು ಅಸಂಖ್ಯಾತ ವಿದ್ವನ್ಮಣಿಗಳ ಕಛೇರಿಗೆ ವೇದಿಕೆಯಾಗಿರುವುದು ಮಾತ್ರವಲ್ಲದೆ ಸಂಗೀತದ ಸೇವೆಗೆ ಕಟಿಬದ್ಧವಾದ ಪ್ರತಿಷ್ಠಿತ ಸಂಸ್ಥೆಯಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯನ್ನುಂಟುಮಾಡುವ ವಿಚಾರ. ದೇಶದ ಅತಿ ದೀರ್ಘ ಇತಿಹಾಸವನ್ನು ಹೊಂದಿರುವ ಇಂತಹ ಮಹಾನ್ ಸಂಗೀತಸಭೆಯಲ್ಲಿ ವರ್ಷಂಪ್ರತಿ ಏರ್ಪಾಡಾಗುವ ಸಮ್ಮೇಳನವೂ ಸಹ ಅಷ್ಟೇ ಉದ್ಬೋಧಪ್ರದವಾದುದು ಹಾಗೂ ಸಂಗೀತಕಛೇರಿಯ ಸರಣಿಗಳು ಬಹು ಸಡಗರದ ವಾತಾವರಣವನ್ನು ಸೃಷ್ಟಿಸುವಂತಹದ್ದು ಎಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವುದು ನನಗೆ ಅತ್ಯಂತ ಸಂತೋಷ ಹಾಗೂ ಹೆಮ್ಮೆಯ ವಿಚಾರವಾಗಿದೆ.

ಭವ್ಯ ಇತಿಹಾಸವಿರುವ ನಮ್ಮ ಕರ್ನಾಟಕ ಶಾಸ್ತ್ರೀಯ ಸಂಗೀತದ ಪರಂಪರೆಯು ತನ್ನ ಎಲ್ಲ ಉತ್ಕೃಷ್ಟ ಅಂಶಗಳೊಂದಿಗೆ ಮುಂದಿನ ಪೀಳಿಗೆಗೆ ತಲುಪಲು ನಾವೆಲ್ಲರೂ ಕೈಜೋಡಿಸಿ ಅಪೇಕ್ಷಿತ ಕಾರ್ಯಗಳನ್ನು ಮಾಡಬೇಕಾಗಿದೆ. ಇಂದು ಅಸಂಖ್ಯಾತ ಪ್ರತಿಭೆಗಳಿದ್ದು ವೇದಿಕೆಗಳ ಸಂಖ್ಯೆಯೂ ಹೆಚ್ಚುತ್ತಿದ್ದು ಗಾಯನಸಮಾಜದಲ್ಲಿ ನಡೆಯುವ ಕಛೇರಿಗಳು ವಿಶಿಷ್ಟವಾಗಿಯೂ ಸಾಂಪ್ರದಾಯಿಕವಾಗಿಯೂ ಇರುವಂತೆ ಉತ್ತೇಜಿಸುವುದು ಕಲಾವಿದರ ಹಾಗೂ ಸಭಿಕರ ಆದ್ಯ ಕರ್ತವ್ಯವಾಗಿದೆ. ಅತಿಹೆಚ್ಚಿನ ಸಂಖ್ಯೆಯಲ್ಲಿ ಸಭಿಕರು ಸೇರಿದಾಗ ಕಲೆಯ ಅನುಭವ, ಕಲಾವಿದರ ಉತ್ಸಾಹ ಎರದೂ ಇಮ್ಮಡಿಗೊಳ್ಳುತ್ತದೆ. ಔಟಿಟುಟಿಜ ವೇದಿಕೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಅನುಕೂಲತೆಯ ದೃಷ್ಟಿಯಿಂದ ಹಲವರು ಇದರ ಮೊರೆ

ಹೋಗುತ್ತಿರುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಆದಾಗ್ಯೂ ಪ್ರತ್ಯಕ್ಷವಾಗಿ ಸ್ವತಃ ಕಛೇರಿಯಲ್ಲಿ ಪಾಲ್ಗೊಂಡು ಕೇಳುವ ಅನುಭವದ ಮಹತ್ವ ಎರಡೂ ಕಡಿಮೆಯಾಗಬಾರದೆಂಬುದು ಅಷ್ಟೇ ಮುಖ್ಯವಾದ ಅಂಶವಾಗಿದೆ. ಕಲಾವಿದರ ಹಾಗೂ ಶ್ರೋತೃಗಳ ನಡುವಿನ ಅವಿನಾಭಾವ ಸಂಬಂಧವು ಸಂಗೀತದ ರಸಾಸ್ವಾದನೆಯನ್ನು ಹೆಚ್ಚಿಸುತ್ತದೆ. ಮಕ್ಕಳಲ್ಲಿ ಕಛೇರಿಗಳನ್ನು ಅದರಲ್ಲೂ ಶಾಸ್ತ್ರೀಯ ಸಂಗೀತದ ಕಛೇರಿಗಳನ್ನು ಕೇಳುವ ಪರಿಪಾಠವನ್ನು ಬೆಳೆಸುವುದು ತಂದೆ-ತಾಯಿಯರ, ಪೋಷಕರ ಗುರುತರ ಜವಾಬ್ದಾರಿಯಾಗಿದೆ. ಸಂಗೀತವನ್ನು ಕೇಳುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿದ್ದು ಸಂಗೀತದ ಕೇಳ್ಮೆಯ ಧನಾತ್ಮಕ ಪರಿಣಾಮಗಳನ್ನು ಅನೇಕ ಸಮ್ಮೇಳನಗಳಲ್ಲಿ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ. ಹೀಗಾಗಿ ಸಂಗೀತದ ಕೇಳ್ಮೆಯಿಂದ ಆಗುವ ಪ್ರಯೋಜನಗಳು ಹಲವು. ಮಾನಸಿಕ ಹಾಗೂ ಬೌದ್ಧಿಕವಾಗಿ ಉಂಟಾಗಬಹುದಾದ ಹಲವು ಸಮಸ್ಯೆಗಳಿಗೆ ಸಂಗೀತದ ಕೇಳ್ಮೆ ವೈದ್ಯಕೀಯ ಚಿಕಿತ್ಸೆಯೊಂದಿಗೆ ಸೂಕ್ತವಾಗಿ ಬಳಸಲ್ಪಟ್ಟಾಗ ಅತ್ಯಂತ ಉತ್ತಮ ಪರಿಣಾಮಗಳನ್ನು ಉಂಟುಮಾಡಬಲ್ಲದು.

ಸಮಾಜದಲ್ಲಿ ವಿಶೇಷಚೇತನರಿಗೆ ಸಮಾನ ಸ್ಥಾನಮಾನಗಳನ್ನು ಕಲ್ಪಿಸುವಲ್ಲಿ ಪ್ರತಿಯೊಬ್ಬರ ಕೊಡುಗೆ ಅಮೂಲ್ಯ. ಸಂಗೀತಗಾರರಾಗಿರಲಿ, ಸಹೃದಯ ಶ್ರೋತೃಗಳಾಗಿರಲಿ ವಿಶೇಷಚೇತನರನ್ನು ಪ್ರೋತ್ಸಾಹಿಸಿ ಉತ್ತೇಜಿಸಿ ತಾವು ಸಮಾಜದಿಂದ ಪಡೆದ ಪ್ರಯೋಜನಕ್ಕೆ ಪ್ರತಿಯಾಗಿ ಉತ್ತಮ ಕೊಡುಗೆಗಳನ್ನು ಸಮಾಜಕ್ಕೆ ನೀಡಬಲ್ಲ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡಲು ಸಮಾಜದ ಪ್ರತಿಯೊಬ್ಬರ ಪಾತ್ರವೂ ಮುಖ್ಯವಾದುದು. ಸಂಗೀತವನ್ನು ಕೇವಲ ಉತ್ಕೃಷ್ಟ ಮನರಂಜನೆ ಎಂದಷ್ಟೇ ಪರಿಗಣಿಸುವ ಕಾಲವು ಸರಿದು ಇಂದು ಸಂಗೀತವು ಒಂದು ಉನ್ನತ ಮಟ್ಟದ ಅಧ್ಯಯನ ವಿಷಯವಾಗಿದೆ ಎಂಬುದನ್ನು ಸಾರಿ ಹೇಳಬೇಕಾಗಿದೆ. ವಿಶೇಷಚೇತನರನ್ನು ಸಂಗೀತ ಕಲೆಯಲ್ಲಿ ಕೇವಲ ಮನರಂಜನಾತ್ಮಕವಾಗಿ ಮಾತ್ರವಲ್ಲದೆ ಶೈಕ್ಷಣಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಪಾಲ್ಗೊಳ್ಳುವಂತೆ ಸಂಗೀತ ಸಭೆಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಕಳಕಳಿಯುಳ್ಳ ಸತ್ವಜೆಗಳು ಪ್ರೇರೇಪಿಸಬೇಕಾಗಿದೆ. ಯಾವುದೇ ದೌರ್ಬಲ್ಯವನ್ನು ಸವಾಲಾಗಿ ಸ್ವೀಕರಿಸಿ ಉತ್ತಮ ಕೊಡುಗೆಗಳನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ ಕಲಾವಿದರ ಸಂಖ್ಯೆ ಕಡಿಮೆಯೇನಲ್ಲ. ನಮ್ಮಲ್ಲಿ ಎಲ್ಲವೂ ಲಭ್ಯವಿದ್ದರೂ ಅದನ್ನು ಸಮರ್ಥವಾಗಿಯೂ ಸಮರ್ಪಕವಾಗಿಯೂ ಪ್ರತಿನಿಧಿಸುವ ಚೈತನ್ಯವನ್ನು ಹೆಚ್ಚಿಸದ ಹೊರತು ಇವಾವುವೂ ಮುಖ್ಯವಾಹಿನಿಯಲ್ಲಿ ಗಮನಕ್ಕೆ ಬರಲು ಸಾಧ್ಯವಿಲ್ಲ. ಹೀಗಿರುವಾಗ ಸಾಮಾನ್ಯರು ಹಾಗೂ ವಿಶೇಷಚೇತನರ ಸಮಾನ ಭಾಗವಹಿಸುವಿಕೆಯನ್ನು ಹೆಚ್ಚು-ಹೆಚ್ಚು ಪ್ರೋತ್ಸಾಹಿಸಬೇಕಾಗಿದೆ. ಕಲೆಯ ಅನುಭವ ವ್ಯಕ್ತಿಗತವಾದುದಾದರೂ ಅದರಿಂದ ಉಂಟಾಗುವ ಪರಿಣಾಮಗಳು ಬಹುತೇಕ ಸಾಮ್ಯತೆಯನ್ನು ಹೊಂದಿರುತ್ತವೆ. ಹೀಗಾಗಿ ಭೇದ-ಭಾವಗಳನ್ನು ಪರಿಮಿತಗೊಳಿಸುವಲ್ಲಿ ಸಂಗೀತವನ್ನು ಒಂದು ಪರಿಣಾಮಕಾರಿ ಸಾಧನವಾಗಿ ಬಳಸಬಹುದಾಗಿದೆ.

ಇಂದಿನ ಯುವಜನತೆಯಲ್ಲಿ ಬೌದ್ಧಿಕ ಶಕ್ತಿ, ಚಿಂತನೆ ಹಾಗೂ ಆಲೋಚನೆಗಳಿಗೆ ಕೊರತೆಯಿಲ್ಲ. ಆದರೆ ಸಮರ್ಪಕವಾದ ಮಾರ್ಗದರ್ಶನವು ಅಗತ್ಯವಿರುವ ಆಕಾಂಕ್ಷಿಯನ್ನು ಸಕಾಲದಲ್ಲಿ ತಲುಪದಿದ್ದರೆ ಜ್ಞಾನ ಹಾಗೂ ಸಾಧನೆಗಳ ಸಮ್ಮೇಳನ ಕಷ್ಟಸಾಧ್ಯವಾಗಬಹುದು. ಇಂದು ಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಹಿಂದೆಂದಿಗಿಂತ ಸಂಗೀತದಲ್ಲಿ ತೊಡಗಿಸಿಕೊಂಡಿರುವವರ ಗಣನೆ ಹೆಚ್ಚು. ಆದಾಗ್ಯೂ ಕ್ರಮಬದ್ಧವಾದ ಪಾಠ, ಶಿಸ್ತಿನ ಸಾಧನೆ, ಸತತ ಪರಿಶ್ರಮಗಳಿಂದ ಕಲೆಯಲ್ಲಿ ಸಿದ್ಧಿ ಇವು ಕಲಾವಿದರ ಕಲೆಯ ಪಯಣದಲ್ಲಿ ಅಂದೂ, ಇಂದೂ ಮುಖ್ಯವಾದುದಾಗಿದೆ. ಬೋಧನೆಯ ಗುಣಮಟ್ಟವನ್ನು ಹೆಚ್ಚಿಸಲು ಸಂಗೀತದಲ್ಲಿ ಹಲವಾರು ಪ್ರಯತ್ನಗಳು ನಡೆಯಬೇಕಾಗಿದೆ. ಪ್ರೌಢಪ್ರಬಂಧಗಳಲ್ಲಿ ಪ್ರಾಯೋಗಿಕ ಸಂಗೀತದ ಅಂಶವನ್ನು ಹೊಂದಿರುವುದನ್ನು ಅಪೇಕ್ಷಣೀಯ ವಿಚಾರವಾಗಿ ಪಾಲಿಸಬೇಕಾಗಿದೆ. ಖಾಸಗಿಯಾಗಿ ಸಂಗೀತದ ತರಬೇತಿಯನ್ನು ನೀಡುವ

ಕ್ರಮದಲ್ಲಿಯೂ ಹಲವು ಸುಧಾರಣೆಗಳು ಅಪೇಕ್ಷಣೀಯ. ಸಂಗೀತ ಸಭೆಗಳಲ್ಲಿ ಶ್ರೋತೃಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಇಂದು ಕಛೇರಿಯನ್ನು ಹೇಗೆ ಕೇಳಬೇಕು? ಹೇಗೆ ಒಂದು ಉತ್ತಮ ಸಂಗೀತವನ್ನು ಆಸ್ವಾದಿಸಬೇಕು? ಎಂಬ ಮುಂತಾದ ವಿಷಯಗಳನ್ನು ಆಗ್ಗಾಗ್ಗೆ ಒತ್ತಿ ಹೇಳಬೇಕಾಗಿದೆ. ಮಾತ್ರವಲ್ಲದೆ ಈ ಕುರಿತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿದೆ. ಶಾಲಾ ಶಿಕ್ಷಣದ ಹಂತದಿಂದ ಸಂಗೀತದ ಕೇಳ್ಮೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಹೀಗೆ ಹಲವು ನಿಟ್ಟಿನಲ್ಲಿ ಸಂಗೀತದ ಪ್ರಚಾರ–ಪ್ರಸಾರಕ್ಕೆ ಸಂಗೀತ ಸಭೆಗಳು, ಸಂಸ್ಥೆಗಳು, ಶಿಕ್ಷಣಸಂಸ್ಥೆಗಳು, ಸಹೃದಯರು ಒಟ್ಟಾಗಿ ಸೇರಿ ಅವಿರತವಾಗಿ ಶ್ರಮಿಸಬೇಕಾಗಿದೆ. ಏಕೆಂದರೆ ಸಂಗೀತ ಕೇವಲ ಒಂದು ಮನರಂಜನೆ ಮಾತ್ರವಲ್ಲ. ಅದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ನಮ್ಮ ದೇಶದ ಗುರುತು. ನಮ್ಮ ಕಲಾವಂತಿಕೆಯ ಅನಾವರಣ. ನಮ್ಮ ಪರಂಪರೆಯ ದ್ಯೋತಕ. ಭವ್ಯ ಇತಿಹಾಸದ ಸಾಕ್ಷಿ. ನಮ್ಮ ವೈಜ್ಞಾನಿಕ ಮನೋಭಾವ ಹಾಗೂ ತಾರ್ಕಿಕ ಆಲೋಚನೆಗಳ ಫಲಶ್ರುತಿ.

ಇನ್ನು ಸಂಗೀತದಿಂದ ಆರ್ಥಿಕ ಪ್ರಯೋಜನಗಳೂ ಇವೆ. ಸಂಗೀತದ ಸಾಂಪ್ರದಾಯಿಕ ವಾದ್ಯಗಳನ್ನು ಅಭ್ಯಸಿಸಿ ಬಳಸುವುದರಿಂದ ದೇಶೀಯ ಕುಶಲಕರ್ಮಿಗಳಿಗೆ ಪ್ರೋತ್ಸಾಹವೂ ದೊರೆತಂತಾಗುತ್ತದೆ. ಧಾರ್ಮಿಕವಾಗಿ ಹೇಳುವುದಾದರೆ ಅನಾದಿ ಕಾಲದಿಂದಲೂ ಸಂಗೀತವನ್ನು ಆತ್ಮೋನ್ನತಿಯ ಸಾಧನೆಗೆ ಹಾದಿ ಎಂದು ಹಲವು ವಾಗ್ಗೇಯಕಾರರು ಉಲ್ಲೇಖಿಸಿರುತ್ತಾರೆ. ತ್ಯಾಗರಾಜರ "ಸ್ವರರಾಗ ಸುಧಾರಸಯುತ ಭಕ್ತಿ" ಎಂಬ ರಚನೆಯಲ್ಲಿ "ಸಪ್ತಸ್ವರ ಮೂಲ ಗುರುತೇ ಮೋಕ್ಷಮುರಾ" ಎಂಬುದಾಗಿ ಉಲ್ಲೇಖಿಸಿದ್ದಾರೆ. ಈ ವಾಕ್ಯವನ್ನು ಸ್ಥೂಲವಾಗಿ ಅರ್ಥೈಸಿಕೊಂಡರೆ ಸಪ್ತಸ್ವರಗಳ ಮೂಲವನ್ನು ಕಂಡುಕೊಳ್ಳುವುದೇ ಮೋಕ್ಷ ಎನ್ನಬಹುದು. ಸಮಾಜದಿಂದ ಪ್ರಯೋಜನಗಳನ್ನು ಪಡೆದವರೆಲ್ಲರೂ ಸಮಾಜಕ್ಕೆ ತಮ್ಮ ಕೊಡುಗೆಗಳನ್ನು ನೀಡಬೇಕೆಂಬುದನ್ನು ಪುರಂದರದಾಸರು "ಕೆರೆಯ ನೀರನು ಕೆರೆಗೆ ಚೆಲ್ಲಿ" ರಚನೆಯಲ್ಲಿ ಸೂಚ್ಯವಾಗಿ ತಿಳಿಸಿದ್ದಾರೆ. ಇಂದು ಸಮಾಜದಲ್ಲಿ ಸತ್‌ಚಿಂತನೆಗಳಿಗೆ ಕೊರತೆಯಿಲ್ಲ. ಆದರೆ ಅದನ್ನು ಪ್ರತಿಬಿಂಬಿಸುವ ಬದ್ಧತೆ ಹೆಚ್ಚಬೇಕಾಗಿದೆ. ಸಂಗೀತವು ಸಮರಸವನ್ನು ಪ್ರತಿನಿಧಿಸಿದರೆ ಅಪಸ್ವರವನ್ನು ವಿರಸಕ್ಕೆ ಹೋಲಿಸಬಹುದು. ನಾವು ಸಂಗೀತದ ಸಾರವನ್ನು ಗ್ರಹಿಸಿ ಒಳಿತನ್ನು ಬಿಂಬಿಸಿ ಅನಪೇಕ್ಷಿತವಾದುದನ್ನು ನಿರ್ಲಕ್ಷ್ಯಿಸಿ ಭವ್ಯ ಭಾರತದ ಉಜ್ವಲ ಭವಿಷ್ಯಕ್ಕಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದ ಮೂಲಕ ಪ್ರಯತ್ನಿಸಬಹುದಾಗಿದೆ. ಸಂಗೀತದಲ್ಲಿ ಅಧ್ಯಾತ್ಮದಿಂದ ಮನರಂಜನೆಯ ವರೆಗಿನ ಎಲ್ಲ ಅಧ್ಯಯನದ ಶಾಖೆಗಳಿಗೂ ವಸ್ತು ಇರುವುದರಿಂದ ಅದರ ಗರಿಷ್ಟ ಪ್ರಯೋಜನವನ್ನು ಪಡೆದುಕೊಳ್ಳುವಲ್ಲಿ ನಾವೆಲ್ಲರೂ ಸಕ್ರಿಯರಾಗಬೇಕಾಗಿದೆ.

ಬಾಲ್ಯದಲ್ಲಿ ಸಂಗೀತ ಕಲೆಯೊಂದಿಗಿನ ಪರಿಚಯ ಮತ್ತು ನಂಟು ಉಂಟಾಗಿದ್ದು ದಿ॥ ಶ್ರೀ ಎಂ.ಎಸ್. ರಾಮರಾವ್ ಹಾಗೂ ದಿ॥ ಶ್ರೀ ಆರ್.ಆರ್. ಕೇಶವ ಮೂರ್ತಿ ಅವರ ಬಳಿ ಗಾಯನ ಮತ್ತು ವಯೋಲಿನ್ ಕಲಿಕೆಯ ಮುಖಾಂತರ. ವಿದುಷಿ ಡಾ॥ ಡಿ. ಶಶಿಕಲ ಅವರ ಬಳಿಯೂ ನಾನು ಪಲ್ಲವಿ ಗಾಯನದ ತರಬೇತಿಯನ್ನು ಪಡೆದಿರುತ್ತೇನೆ ಹಾಗೂ ಇಂದಿಗೂ ಸಂಗೀತವನ್ನು ಕಲಿಯುತ್ತಿದ್ದೇನೆ. ವಿದುಷಿ ಡಾ॥ ಡಿ. ಶಶಿಕಲ ಅವರ ಪಲ್ಲವಿ ಹಾಡುಗಾರಿಕೆ ಮತ್ತು ಅನುಭವ ಬಹಳ ಆಳವಾದುದ್ದು. ಆನಂತರ ಪದ್ಮವಿಭೂಷಣ ಸಂಗೀತಕಲಾನಿಧಿ ಶ್ರೀಮತಿ ಡಿ.ಕೆ. ಪಟ್ಟಮ್ಮಾಳ್ ಅವರು ನನ್ನ ಮಾನಸ ಗುರುವಾಗಿದ್ದು, ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮಾರ್ಗದರ್ಶನ ಪಡೆದಿರುತ್ತೇನೆ. ಒಟ್ಟಿನಲ್ಲಿ ಇಂತಹ ಮಹಾನ್ ಗುರು ಪರಂಪರೆಯ ಮಾರ್ಗದರ್ಶನ ಮತ್ತು ತರಬೇತಿಯಿಂದಾಗಿ ನನಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಜ್ಞಾನವು ಅನುಗ್ರಹಿಸಲ್ಪಟ್ಟಿದೆ ಎಂದು ಈ ಸಂದರ್ಭದಲ್ಲಿ ನನ್ನ ಎಲ್ಲ ಗುರುಗಳನ್ನು ವಿನಮ್ರನಾಗಿ ಸ್ಮರಿಸುತ್ತೇನೆ.

ಮತ್ತೊಮ್ಮೆ ನನಗೆ ಈ ಅವಕಾಶವನ್ನು ನೀಡಿದ ಗಾಯನ ಸಮಾಜದ ಎಲ್ಲ ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ತಿಳಿಸಿ ತಾಳ್ಮೆಯಿಂದ ಕೇಳಿದ ನಿಮ್ಮೆಲ್ಲರಿಗೂ ನಮಸ್ಕರಿಸಿ ನನ್ನ ಅಧ್ಯಕ್ಷ ಭಾಷಣವನ್ನು ಸಂಪನ್ನಗೊಳಿಸುತ್ತೇನೆ.

## We thank our Sponsors

**Dr. Veerendra Hegde**
**Dharmasthala**

**Essae Music Foundation**

**Karnataka Bank**

**Smt. Usha Chander &**
**Sri Seethapathy Chander**

**Sri V. T. Srinivasan & Family**

**Smt. Kamala Subba Rao**

**Canara Bank**

**Vidyaranya Pratishtana**
**Sri M.V. Sathyanarayan**

## Programme for the Month of December 2024
## On Sunday15th December 2024 at 5.30 pm.

**CHIEF SPONSOR**
**Ved. PADMA & Sri K.T. NARAIN MEMPRIAL ENDOWMENT**
**Co-SPONSORS**
**Prof. S.K. LAKSHMANA RAO ENDOWMENT**
**Sri N. VENKATARAMU MEMORIAL ENDOWMENT**
**Smt. AMBABAI HANGAL ENDOWMENT**

| | | |
|---|---|---|
| Vid. Anjali Sriram | ............. | Vocal |
| Vid. Vishwajith M.V. | .............. | Violin |
| Vid. Sunil Subramanya | .............. | Mridangam |
| Vid. Karthik Mani | .............. | Ghata |

# BANGALORE GAYANA SAMAJA

## The main concerts (6 pm to 9 pm) are held under the fallowing endowments

**Sri Pathi Adinaranaiah & Smt Pathi Ramalakshmamma Endowment**
Donor : Pathi Sreedhara Shantha Charitable Trust

**Jyothi Charitable Trust (R)**
Donor: Smt Seetha Subramanyam.

**Smt Janakamma & Vid M.R.Srinivasa Raghavachar Memorial Endowment**
Donor :Smt Vasundhara G.Iyengar (USA)

**Smt Navamani Memorial Endowment**
Donor: Sri N. Srinivasan

**Smt Lalitha & Sri K.V. Ashwathnarayan Endowment**
Donor: Gnyana Mandir Trust & Sudarshan Vidyamandir Institutions

**K. Sampath Memorial endowment**
Donor: Smt Kousalya Sampath

**Sri P.V.Vasantha Kumar & Smt Kumuda Kumar Memorial Endowment**
Donor: Smt Shakunthala Raghavan & Smt Malini Jagannathan

**Vid Nagamani Ramakrishna Memorial Endowment**
Donor: Sri Ramakrishna.

**Vid K.Venkatadasappa Memorial Endowment**
Donor: K.V.Achyuta & Prof K.R.Keshavamurthy

**Smt Narasamma & Sri H. Bhimarao Endowment**
Donor : Sri H.Kamalanath & family

**Smt Shamalamba Kamalanath Endowment**
Donor: Sri B. Rajashekar, B.Gurunath, B.Ananth

**Smt S.R. Nagarathna Memorial Endowment**
Donor: Sri S.Seetharam

**Sri V.T. Srinivasan Memorial Endowment**
Donor: Family members

**Sri K.S. Rangaraj & Smt K.R. Sreemathi Endowment**
Donor: Family Members

**D.R. Srikantaiah Memorial Endowment**

**Vid B.N. Suresh Memorial Endowment**

**Sri K.R. Ramagopal and Smt. Lakshmi Ramagopal Endowment**

**Smt. Shylaja Alwa and Sri Mohan Dev Alva Endowment**

**Shanbhogue Sri Billur Narayana Rao and Smt. Thirumani Gowramma Memorial Endowment**
Donor : B.N. Krishnamurthy

## ನಾದಚಿಂತಾಮಣಿ, ಗಾನ ವಿಶಾರದ, ಕರ್ನಾಟಕ ಕಲಾ ತಿಲಕ ಮಹಾ ವಿದ್ವಾನ್‌ಶ್ರೀ ಆನೂರು ಸೂರ್ಯನಾರಾಯಣ

ಸಂಗೀತ ಎಂಬುದು ಲಲಿತಕಲೆಗಳಲ್ಲಿಯೇ ಶ್ರೇಷ್ಠವಾದ ಮತ್ತು ಸರ್ವರಿಗೂಆಹ್ಲಾದಕರವಾದ ವಿದ್ಯೆ. ಸಂಗೀತವೆಂಬ ರಸವಿದ್ಯೆಯು ಐಹಿಕ ಮತ್ತು ಆಮುಷ್ಮಿಕ ಆನಂದಕ್ಕೆ ಮೂಲ. ನಾದೋಪಾಸನರೂಪವಾದ ತಪಸ್ಸಿದ್ಧಿಯಿಂದ ಮತ್ತು ದೈವಾನುಗ್ರಹ ಬಲದಿಂದ ಪ್ರಾಪ್ತವಾಗುವ ಸಂಗೀತ ರಸಾಸ್ವಾದನ ಮನುಕುಲದ ಅಮೂಲ್ಯಗಂಧರ್ವ ವಿದ್ಯೆ. ಇಂತಹ ಸಂಗೀತ ಜ್ಞಾನವನ್ನು ತಲೆಮಾರುಗಳಿಂದ ಯಾವುದೇಚ್ಯುತಿಯಿಲ್ಲದೆ ಮತ್ತು ಸಂಗೀತ ಪರಂಪರೆಗೂಧಕ್ಕೆಯಾಗದಂತೆ ನಡೆಸಿಕೊಂಡು ಬಂದವರಲ್ಲಿ ಒಬ್ಬರು ಶ್ರೀ ಆನೂರು ಸೂರ್ಯನಾರಾಯಣರು. ಶ್ರೀ ಆನೂರು ಸೂರ್ಯನಾರಾಯಣ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೇ ತಮ್ಮ ಉಸಿರಾಗಿ ಹೊತ್ತಿರುವ ಸಂಗೀತಗಾರರ ಕುಟುಂಬದಲ್ಲಿ ಜನಿಸಿದರು. ಇವರತಂದೆಆನೂರು ಸುಬ್ಬರಾಯ ಶಾಸ್ತ್ರಿಗಳು ಓರ್ವ ವೀಣಾ ವಿದ್ವಾಂಸರು ಹಾಗೂ ಇವರ ಸಹೋದರ ವಿದ್ವಾನ್‌ಆನೂರು ಶಾಮಣ್ಣಅವರೂ ಸಹ ವಿಖ್ಯಾತ ವೀಣಾ ವಾದಕರಲ್ಲಿ ಒಬ್ಬರು.

ಶ್ರೀ ಆನೂರು ಸೂರ್ಯನಾರಾಯಣ ಇವರು ತಮ್ಮ ತಂದೆ ಮತ್ತು ಚಿಕ್ಕಪ್ಪನವರ ಮಾರ್ಗದರ್ಶನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿತರು, ಆನಂತರ ವಿದ್ವಾನ್ ಫಾಲ್ಗಾಟ್ ಸೋಮೇಶ್ವರ ಭಾಗವತರ್ ಮತ್ತು ಸ್ವರ ಸಿಂಹ ವಿದ್ವಾನ್ ಕರೂರುಕೃಷ್ಣರಾವ್ ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನುಕಲಿತರು. ಮುಂದೆ ಪಂದನಲ್ಲೂರು ಮೀನಾಕ್ಷಿ ಸುಂದರಂ ಪಿಳ್ಳೈ ಅವರ ಬಳಿ ಸಂಗೀತವನ್ನುಕಲಿತರು.ಏಳು ವರ್ಷವಿದ್ದಾಗಲೆ ಬಾಲಕ ಆನೂರು ಸೂರ್ಯನಾರಾಯಣರು ಒಮ್ಮೆ ನೊಬಲ್ ಪ್ರಶಸ್ತಿ ವಿಜೇತ ಸರ್ ಸಿ.ವಿ. ರಾಮನ್‌ಅವರ ಸಮ್ಮುಖದಲ್ಲಿ ಸುಶ್ರಾವ್ಯವಾಗಿ ಹಾಡಿಅವರಿಂದ ಸಮ್ಮಾನಿತರಾಗಿದ್ದರು. 1954ರಲ್ಲಿ ಭಾರತ ಸರ್ಕಾರದ ಸಾಂಸ್ಕೃತಿಕ ತಂಡದಲ್ಲಿ ಕರ್ನಾಟಕದಿಂದಆಯ್ಕೆಯಾದ ಮೊದಲ ಗಾಯಕರು,

ಶ್ರೀ ಆನೂರು ಸೂರ್ಯನಾರಾಯಣಇವರು ಶ್ರೀ ಉದಯಶಂಕರ್ ಅವರ ನೃತ್ಯತಂಡದಲ್ಲಿಯೂ ಸಂಗೀತ ವಾದಕರಾಗಿಕಾರ್ಯ ನಿರ್ವಹಿಸಿದ್ದವರು. ಶ್ರೀ ಉದಯಶಂಕರ್ ಅವರು ಖ್ಯಾತ ಸಿತಾರ್ ವಾದಕ ಭಾರತರತ್ನ ಪಂಡಿತ್ ಶ್ರೀ ರವಿಶಂಕರ್ ಅವರ ಅಣ್ಣ.

ಶ್ರೀಆನೂರು ಸೂರ್ಯನಾರಾಯಣ ಇವರು ವಿಶ್ವವಿಖ್ಯಾತ ನೃತ್ಯ ಪಟುಗಳಿಗೆ ಸಂಗೀತ ಸಂಯೋಜನೆ ಮತ್ತು ಗಾಯನವನ್ನು ಮಾಡಿದ್ದಾರೆ. ಅವರುಗಳಲ್ಲಿ ಶ್ರೀಮತಿ ಇಂದ್ರಾಣಿ ರಹಮಾನ್, ಶ್ರೀ ಸುಧಾರಾಣಿ ರಘುಪತಿ, ಶ್ರೀಮತಿ ಚಿತ್ರಾ ವಿಶ್ವೇಶ್ವರನ್, ಶ್ರೀ ಯು.ಎಸ್. ಕೃಷ್ಣರಾವ್, ಶ್ರೀಮತಿ ಮಾಯಾರಾವ್ ದಿದಿ, ಆಚಾರ್ಯ ಕೌಶಿಕ್, ಚಂದ್ರಭವದೇವಿ, ಸೋನಾಲ್ ಮಾನ್‌ಸಿಂಗ್, ರಾಮಗೋಪಾಲ್ ಇನ್ನೂ ಹಲವರು. ಶ್ರೀಯುತರು ನೃತ್ಯಗಳಿಗೆ ರಚಿಸಿರುವ ಕೃತಿಗಳು ಇಂದಿಗೂ ಅನುರಣಿಸುತ್ತಿವೆ. ಭಾರತದಲ್ಲಿ ಗಾಯನ ಮತ್ತು ನಟುವಾಂಗವನ್ನು ನೆರವೇರಿಸುವ ಸಾಮರ್ಥ್ಯವುಳ್ಳ ಕೆಲವೇ ಕೆಲವು ಕಲಾವಿದರಲ್ಲಿ ಇವರೂ ಒಬ್ಬರು. ಶ್ರೀಯುತರು ಒಮ್ಮೆ ಸಂಗೀತ ಕಲಾನಿಧಿ ಬಾಲಸರಸ್ವತಿಅವರೊಂದಿಗೆಗಾಯನ ಮಾಡುವ ಅವಕಾಶ ಒದಗಿ ಬಂದಿತ್ತು. ಅಲ್ಲದೆ ಖ್ಯಾತರಂಗಭೂಮಿ ಕಲಾವಿದರಾದ ಶ್ರೀ ಸುಬ್ಬಯ್ಯ ನಾಯ್ಡು ಮತ್ತು ಶ್ರೀ ಗುಬ್ಬಿ ವೀರಣ್ಣ ಇವರುಗಳೊಂದಿಗೂ ಕಾರ್ಯ ನಿರ್ವಹಿಸಿದ್ದರು.

ಶ್ರೀ ಆನೂರು ಸೂರ್ಯನಾರಾಯಣ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ**'ಕರ್ನಾಟಕ ಕಲಾ ತಿಲಕ'**, ಚಿಂತಾಮಣಿಗಾಯನ ಸಮಾಜದಿಂದ**'ನಾದಚಿಂತಾಮಣಿ'**, **'ಗಾನ ವಿಶಾರದ'**, ಬೆಂಗಳೂರು ಗಾಯನ ಸಮಾಜದಿಂದ **''ವರ್ಷದಕಲಾವಿದರು'** ಪ್ರಶಸ್ತಿ, ಇನ್ನೂ ಮುಂತಾದ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ತಮ್ಮ ಅಪಾರವಾದ ಸಂಗೀತ ಪ್ರತಿಭೆಯಿಂದ ಭಾಜನರಾಗಿದ್ದರು.

ದೇಶ–ವಿದೇಶಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನುಆಧುನಿಕಯುಗದಲ್ಲಿ ಅವಿಶ್ರಾಂತವಾಗಿ ಪಸರಿಸಿ ಹೊಸ ಪರ್ವಕ್ಕೆ ನಾಂದಿ ಹಾಡಿದ **ಶ್ರೀ ಆನೂರು ಸೂರ್ಯನಾರಾಯಣ** ಅವರ ಜನ್ಮ ಶತಮಾನೋತ್ಸವ ವರ್ಷವುಇದಾಗಿದ್ದು ಈ ಸಂದರ್ಭದಲ್ಲಿಅವರ ಸ್ಮರಣಾರ್ಥ ಈ ನುಡಿ ನಮನ

**(ಡಾ॥ ಎಸ್.ಸಿ. ಶರ್ಮ)**

**ಸಂಗೀತಗಾರರು ಮತ್ತು ಸಂಗೀತಜ್ಞರು**

# MA Narasimhachar

Sangeeta Bhushana M A Narasimhachar, fondly addressed as “MAN” by music lovers and connoisseurs, was born into a family of music. His father MA Krishnaswamy Iyengar was associated with great stalwarts of music and and mother Rajamma was his first music teacher. Driven to music with an inherent passion, MAN obtained his formal training at Annamalai University subsequently obtained the “Sangeeta Bhushana” title from the university after the completion of the course. He had musical giants like Ponniah Pillai, Sabesha Iyer, Tiger varadachar and TK Rangachari as his Gurus.

With the sole intention of propagating and preserving the rich treasure of this divine art form, MAN started the GANAKALAMANDIRA in the year 1942, at his Mysore residence. The school gained popularity innotime and witnessed several milestone events of which the 80$^{th}$ birthday celebrations of Sri Mysore Vasudevacharya was the most notable one. Ganakalamandira used to be frequented by other musical giants like Ariyakudi Ramanuja Iyengar, Tiger Varadachar, GNB and so on.

Leading a simple life, MAN was a man of few words. His wife Rajalakshmi was very supportive in his ideals and goals and very soon Ganakalamandira celebrated its silver jubilee in the year 1967. Professor Sambamurthy, a renowned musicologist presided over the function where Sri Semmangudi Srinivasa Iyer was honoured, followed by his vocal concert.In the year 1972, MAN relocated to Bangalore as he was offered the HOD post in the Music department of APS college.Subsequently, his school Ganakalamandiradrew attention in the Bangalore art circles. With the able support of his daughters Mythili andMeera, the school grew to larger heights.The Golden jubilee was celebrated in the year 1992 with a grand vocal concert of Vid. K V Narayanaswamy.The Diamond jubilee was celebrated in the year 2002.

MAN is credited with the productionof several musical operas of which Thyagaraja's Nauka Charitram, Pallaki Seva prabandham, Guruguha Stuthi and PanchalingaSthalakrithis of Dikshitars compositions are among the notable ones. They have been presented at major sabhas of India. His tenure as teacher in the South Zone Cultural Centre,Thiruvaiyaaru holds a very special place in his musical journey as he is the only Teacher from Karnataka to have been selected for this prestigious post. A regular artist of AIR, MAN has the credit of bringing to light several rare compositions of Vaageyakaaras during his radio concerts. He has also been aired on Radio Ceylon. He has performed many prestigious sabhas and organisations throughout India.He has been instrumental in inviting stalwarts like MSS and MLV to APS college to address the students and have interactive sessions with them. He would regularly participate in the music conferences held at Madras Music Academy Chennai, Bangalore Gayana Samaja and such events. He has served on the panel of judges for the cultural scholarships instituted by the Ministry of Culture, New Delhi. He has enriched many a student's knowledge through his lecture demonstrations and books published on various topics in the field of music and musicologists. He is also instrumental in the co-founding of the Nadabrahma Sabha in Mysore and actively involved in the establishment of the Chowdiah Memorial Hall, during his tenure as a joint secretary of the Academy of Music.

A recipient of the Central Sangeeta Natak AcademyPuraskar in the year 2004, which was posthumously received by his wife Rajalakshmi, MAN is also a Rajyothsava Awardee for the year 1992. The Karnataka Government awarded him with the “Rajya Sangeetha Vidwan” title in the year 1999. He received the Sangeeta Ratna T Chowdiah state level award in the 1996 besides innumerable notable titles and awards from various prestigious organisations and Sabhas.

As would befit a MAN of this calibre, it is but apt that his legacy and ideals be carried forward by his family members to the future generations. Thus resulted the birth of an organisation the MA NARASIMHACHAR MUSIC FOUNDATION (MANMF), in the year 2001, which primarily focuses on recognising and encouraging young talent by giving them scholarships to pursue the music education. “Preserve, Promote and Propagate”-this being the motto of MANMF, a music festival is organised every yearduring which a renowned artist is awarded the title of GanaVaaridhi and given a cash purse as a token of recognition of his/her work towards the music field.

This year being the Centenary year of this great genius, the Foundation has embarked on a year long celebration, by organising kutcheris every month in venues which hold a special place in the musical journey of this great yet humble soul. The centenary celebrations will conclude with a grand Finale at the Chowdiah Memorial Hall on the Nov 15th with a special award presentation to the Ranjani-Gayathri duo followed by their music concert.

**-By Ranjini Jayasimha.**


**With Best Compliments From :**


# INTEK TAPES PVT. LTD.

FIXON®

*INTEX TAPES PVT. LTD.*

**Since 1988**

Manufacturers of All kinds of Pressure Sensitive Adhesive Tapes
No. 13, 9th Main, 3rd Block, Jayanagar,
Above State Bank Of India, BANGALORE-560 011
PH. : 080-26655691 / 26655692. FAX : 080-26656693
Email : sales@intektapes.com, Visit us : www.intektapes.com



## ಭಾರತೀಯ ತತ್ವಶಾಸ್ತ್ರಗಳ ವಿರಾಟ್ಐಕ್ಯತಾವಾದಿ: ವಿದ್ಯಾಲಂಕಾರ ಪ್ರೊ॥ ಎಸ್.ಕೆ. ರಾಮಚಂದ್ರರಾವ್

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ**

**ಸ್ನೇಹೋ ಭಕ್ತಿರಿತಿ ಪ್ರೋಕ್ತಃತಯಾ ಮುಕ್ತಿರ್ನಚಾನ್ಯಥಾ**

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮನ್ಮಧ್ವಾಚಾರ್ಯರು ಜ್ಞಾನ–ಭಕ್ತಿಯ ಬಗ್ಗೆ ವ್ಯಾಖ್ಯಾನಿಸುತ್ತಾ ಮಾಹಾತ್ಮ್ಯಜ್ಞಾನವು ಸುದೃಢ ಸ್ನೇಹವು ಸೇರಿದರೆ ಭಕ್ತಿಯಜನ್ಯ ಎಂದು ಹೇಳುತ್ತಾರೆ. ಇದುಜ್ಞಾನಪೂರ್ವಪರ ಸ್ನೇಹವೆಂದು ಭಕ್ತಿಗೆ ಸರಳವಾದ ನಿರ್ವಚನವಾಗುತ್ತದೆ. ಜ್ಞಾನ–ಭಕ್ತಿ ಇವೆರಡರ ಸಂಗಮವಾಗಿ ನಮ್ಮ ಕಾಲದಲ್ಲಿ ಇದ್ದಂತಹ ಅನನ್ಯ ಜ್ಞಾನೋಪಾಸಕರಾಗಿದ್ದಂತಹ’ **ವಿದ್ಯಾಲಂಕಾರ ಪ್ರೊ॥ ಸಾಲಿಗ್ರಾಮ ಕೃಷ್ಣರಾಮಚಂದ್ರರಾಯರು’** ಇದಕ್ಕೆ ಅನ್ವರ್ಥನಾಮ ಎನಿಸುತ್ತಾರೆ.

ಮಾಧ್ವ ಕುಟುಂಬದಕ್ಕೆ ಸೇರಿದಶ್ರೀ ಕೃಷ್ಣನಾರಾಯಣರಾವ್ ಮತ್ತು ಕಮಲಾಬಾಯಿ ದಂಪತಿಗಳ ಮಗನಾಗಿ ಶ್ರೀಯುತರು ಜನಿಸಿದ್ದು 4ನೇ ಸೆಪ್ಟೆಂಬರ್ 1925ರಲ್ಲಿ ಹಾಸನದ ಒಂದು ಸಣ್ಣ ಗ್ರಾಮದಲ್ಲಿ. ಬೆಂಗಳೂರಿನಲ್ಲಿ ತಮ್ಮ ಅಜ್ಜ–ಅಜ್ಜಿಯರ ಮನೆಯಲ್ಲಿ ಬಾಲ್ಯವನ್ನು ಹಾಗೂ ಶಾಲಾ ಶಿಕ್ಷಣವನ್ನು ಕಳೆಯುತ್ತಾರೆ, ಶ್ರೀ ಅಗ್ನಿಹೋತ್ರಿಯಜ್ಞವಿಠಲಾಚಾರ್ ಎಂಬುವರಿಂದ ಸಂಸ್ಕೃತ ಶಿಕ್ಷಣವನ್ನು ಪಡೆಯುತ್ತಾರೆ. ಏತನ್ಮಧ್ಯೆ ಇವರ ಕುಟುಂಬವು ನಂಜನಗೂಡಿಗೆ ನಂತರ ಮೈಸೂರು ಸ್ಥಳಾಂತರಗೊಳ್ಳುತ್ತದೆ. 1949ರಲ್ಲಿ ರಾಮಚಂದ್ರರಾಯರು ಮೈಸೂರು ವಿಶ್ವವಿದ್ಯಾಲಯದಿಂದ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಮುಂದೆ ಇವರು ಇಂಡಿಯನ್ ಇನ್ಸ್ಟಿಟ್ಯೂಟ್ಆಫ್ ಸೈನ್ಸ್, ಬೆಂಗಳೂರು ಇಲ್ಲಿನ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾರೆ. ತದನಂತರ 1954ರಿಂದ 1965ವರೆಗೆ ನಿಮಾನ್ಸ್‌ನ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾರೆ. 1962ರಲ್ಲಿ ಭಾರತದಲ್ಲಿ ಮನಃಶಾಸ್ತ್ರೀಯ ಚಿಂತನೆಗಳ ಬೆಳವಣಿಗೆ ಎಂಬ ಕೃತಿಯನ್ನು ಆಂಗ್ಲ ಭಾಷೆಯಲ್ಲಿ ರಚಿಸುತ್ತಾರೆ. ಇವರು ನಿಮ್ಹಾನ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಭಾರತೀಯಆವೃತ್ತಿಯ ವಿಷಯಾಧಾರಿತಗ್ರಹಿಕಾ ಪರೀಕ್ಷೆಯನ್ನು ಮತ್ತು ಪ್ರಯೋಗಗಳನ್ನು ಚಾಲ್ತಿಗೆ ತರುತ್ತಾರೆ. ನಿಮ್ಹಾನ್ಸ್‌ನಲ್ಲಿ ಇದ್ದ ಮನಃಶಾಸ್ತ್ರದ ಪಠ್ಯಕ್ರಮವನ್ನು ಪರಿಷ್ಕರಿಸುವಲ್ಲಿ ಮತ್ತು ಭಾರತೀಯತತ್ವಶಾಸ್ತ್ರದ ವಿಷಯಗಳನ್ನು ಪಠ್ಯದಲ್ಲಿ ಅಳವಡಿಸುವಲ್ಲಿ ರಾಮಚಂದ್ರರಾಯರ ಪಾತ್ರ ಹಿರಿದು. ಇದರಿಂದ ಮುಂದೆ ಮನಃಶಾಸ್ತ್ರದಲ್ಲಿ ಭಾರತೀಯ ತತ್ವಶಾಸ್ತ್ರಗಳ ದೃಷ್ಟಿಕೋನದೊಂದಿಗೆ ಅಧ್ಯಯನ ನಡೆಸಲು ಸಹಕಾರಿಯಾಯಿತು. 1965ರಲ್ಲಿ ನಿಮ್ಹಾನ್ಸ್ ಅನ್ನು ತೊರೆದ ರಾಮಚಂದ್ರರಾಯರು, ಬೆಂಗಳೂರಿನ ಹಲವಾರು ಶಿಕ್ಷಣ ಸಂಸ್ಥೆಗಳ ವಿಶೇಷ ಅತಿಥಿ ಪ್ರಾಧ್ಯಾಪಕರಾಗಿ, ಮನಃಶಾಸ್ತ್ರ, ಶಿಕ್ಷಣ, ತತ್ವಶಾಸ್ತ್ರ ಮತ್ತುಇತರೆ ಮಾನವಿಕ ಶಾಸ್ತ್ರಗಳ ಕುರಿತಂತೆ ಉಪನ್ಯಾಸ ಮತ್ತು ಅಧ್ಯಾಪನವನ್ನು ಕೈಗೊಂಡಿರುತ್ತಾರೆ. ಆನಂತರತಮ್ಮ ಹೆಚ್ಚಿನ ಸಮಯವನ್ನು ಬರವಣಿಗೆ, ಸಾರ್ವಜನಿಕ ಸಭೆಗಳು ಮತ್ತು ಮನೆಯಲ್ಲಿಯೇ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಿರುತ್ತಾರೆ.

ಪ್ರೊ॥ ರಾಮಚಂದ್ರರಾಯರು ಸಂಸ್ಕೃತ, ಕನ್ನಡ ಮತ್ತುಆಂಗ್ಲ ಭಾಷೆಗಳಲ್ಲಿ ಅಪಾರವಾದ ಪಾಂಡಿತ್ಯವಿದ್ದು, ಭಾರತೀಯ ಸಂಸ್ಕೃತಿ, ತತ್ವಜ್ಞಾನ, ಕಲೆ, ಸಂಗೀತ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಅಗಾಧವಾದ ಮತ್ತು ಆಳ ಜ್ಞಾನ ಹೊಂದಿದ್ದು, ಈ ವಿಷಯಗಳಲ್ಲಿ ಹಲವಾರು ಕೃತಿ–ಗ್ರಂಥಗಳನ್ನು ರಚಿಸಿದ್ದಾರೆ. ಇವೆಲ್ಲಾ ಶ್ರೀಯುತರು ಕೈಗೊಂಡಿದ್ದ ಆಳವಾದ ಸಂಶೋಧನೆಯ ಫಲಶೃತಿಯಾಗಿ ಹೊಮ್ಮಿರುತ್ತದೆ. ಇವೆಲ್ಲಕ್ಕೆ ರತ್ನ ಪ್ರಾಯದಂತೆ ಶ್ರೀಯುತರು ಋಗ್ವೇದ ಕುರಿತು ಆಂಗ್ಲ ಭಾಷೆಯಲ್ಲಿ ರಚಿಸಿದ 32 ಸಂಪುಟಗಳ ಬೃಹತ್ ಗ್ರಂಥಮಾಲೆಯು ಭಾರತೀಯತತ್ವಶಾಸ್ತ್ರ ಲೋಕಕ್ಕೆ ನೀಡಿರುವ ಅತ್ಯಮೂಲ್ಯ ಕೃತಿ ಸಂಪತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶ್ರೀಯುತರು ಶ್ರೀ ಪುರಂದರದಾಸರ ಐದನೇ ಶತಮಾನೋತ್ಸವದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ವತಿಯಿಂದ ಹೊರತಂದ **'ಪುರಂದರ ಸಾಹಿತ್ಯದರ್ಶನ'** ದಗ್ರಂಥಮಾಲೆಗೆ ಸಂಪಾದಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಇಂದಿಗೂ ಈ ಗ್ರಂಥವು ಹರಿದಾಸ ಸಾಹಿತ್ಯ ಅಧ್ಯಯನಾಸಕ್ತರಿಗೆ ಅಮೂಲ್ಯವಾದ ವಿಷಯ ಆಕರಗಳಿಂದ ಕೂಡಿರುವಗ್ರಂಥವಾಗಿದೆ.

ಪ್ರೊ॥ ರಾಮಚಂದ್ರರಾಯರು ರಚಿಸಿದ ಕೆಲವು ಕನ್ನಡ ಗ್ರಂಥಗಳು ಬದುಕಿಗೆ ಬೆಳಕು, ಅವಧೂತ, ದಂಡಿಯ ಅವಂತಿ ಸುಂದರಿ, ಬೋಧಿಯ ಬೆಳಕಿನಲ್ಲಿ, ವೇದದಲ್ಲಿನ ಕಥೆಗಳು, ಭಾರತದದೇವಾಲಯ, ಶ್ರೀರಾಮಾನುಜ ದರ್ಶನ, ಧರ್ಮ, ವೇದ ಮತ್ತು ವೇದಾಂತ, ವೇದ ವಾಙ್ಮಯ ಮತ್ತು ಉಪನಿಷತ್ತುಗಳು, ಶಾಂತಲೆ–ನೃತ್ಯರೂಪಕ, ಅಲ್ಲದೆ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದಂತೆ ನಮ್ಮ ಸಂಗೀತ ಮತ್ತು ವಾಗ್ಗೇಯಕಾರರು, ಭರತಮುನಿಯ ನಾಟ್ಯಶಾಸ್ತ್ರ, ಎಂಬ ಕೃತಿಗಳನ್ನು ರಚಿಸಿರುತ್ತಾರೆ. ಅಂತೆಯೇ ಆಂಗ್ಲ ಭಾಷೆಯಲ್ಲಿ 'The Three Acharyas–Shankara, Ramanuja and Madhva', 'The Teachings of Buddha', 'Temples: Icons and Rituals', 'Development of Psychological Thought in India', 'Social Institutions among the Hindus and other writings', 'Origin of Indian Thought and other Writings', 'The Message of the Bhagavad Gita', ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಪ್ರೊ॥ ರಾಮಚಂದ್ರರಾಯರು **'ಪೌರವ ದಿಗ್ವಿಜಯ'** ಎಂಬು ಸಂಸ್ಕೃತ ರೂಪಕವನ್ನು, ಬುದ್ಧಘೋಷನ **'ವಿಸುದ್ದಿಮಗ್ಗ'** ಕೃತಿಗೆ ವಿಮರ್ಶಾತ್ಮಕ ಕೃತಿಯನ್ನು ಪಾಲಿ ಭಾಷೆಯಲ್ಲಿಯೂ ರಚಿಸಿರುತ್ತಾರೆ. ಶ್ರೀಯುತರು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್, ಇಂಡಿಯನ್‌ಇನ್ಸ್ಟಿಟ್ಯೂಟ್‌ಆಫ್ ಮ್ಯಾನೇಜ್‌ಮೆಂಟ್, ಕಾಲಿಸನ್ ಕಾಲೇಜ್ ಸ್ಟಡಿ ಸೆಂಟರ್ ಆಫ್ ಯೂನಿವರ್ಸಿಟಿ ಪೆಸಿಫಿಕ್, ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅತಿಥಿಉಪನ್ಯಾಸಕರಾಗಿಕಾರ್ಯ ನಿರ್ವಹಿಸಿದ್ದರು.

ಪ್ರೊ॥ ರಾಮಚಂದ್ರರಾಯರು ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕಚಿತ್ರ ಕಲಾ ಪರಿಷತ್, ತಿರುಮಲ ತಿರುಪತಿದೇವಸ್ಥಾನ ಮಂಡಳಿ, ಇವುಗಳ ಸದಸ್ಯರಾಗಿಕಾರ್ಯ ನಿರ್ವಹಿಸಿದ್ದರು. ಪ್ರೊ॥ ಎಸ್.ಕೆ. ರಾಮಚಂದ್ರರಾಯರ ವಿದ್ವತ್ ಪ್ರತಿಭೆಗೆ ಹಲವು ಪ್ರಶಸ್ತ ಸಮ್ಮಾನಗಳು ಸಂದಿದ್ದು, ಅವುಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿಂದ ಗೌರವ ಡಿ.ಲಿಟ್., ಸ್ವಾಮಿಗಂಗೇಶ್ವರಾನಂದಜೀಟ್ರಸ್ಟ್, ಮುಂಬೈ, ಇವರಿಂದ ವೇದರತ್ನ ಸಮ್ಮಾನ್, ನಿಡುಮಾಮಿಡಿ ಶ್ರೀಶೈಲ ಮಠದಿಂದ ವಿದ್ಯಾಲಂಕಾರ, ರಾಷ್ಟ್ರೀಯ ಸಂಸ್ಕೃತಿ ವಿದ್ಯಾಪೀಠ, ತಿರುಪತಿ, ಇವರಿಂದ ವಾಚಸ್ಪತಿ, ಬೆಂಗಳೂರು ಗಾಯನ ಸಮಾಜದಿಂದ ಸಂಗೀತ`ಕಲಾರತ್ನ, ಅ.ನ.ಕೃ. ಪ್ರಶಸ್ತಿ, ವೇದ ಶಾಸ್ತ್ರ ಪೋಷಿಣಿ ಸಭಾ, ಮೈಸೂರು, ಇವರಿಂದ ಶಾಸ್ತ್ರ ವಿದ್ಯಾನಿಧಿ ಪ್ರಶಸ್ತಿ, ಭಂಡಾರಕೇರಿ ಮಠದಿಂದ ಮಾನ್ಯ ವಿದ್ಯಾ ವಿಚಕ್ಷಣ ಪ್ರಶಸ್ತಿ, 1984ಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿ.

ಭಾರತೀಯ ತತ್ವಶಾಸ್ತ್ರಗಳ ಕುರಿತು ಆಧುನಿಕ ದೃಷ್ಟಿಕೋನದ ಸಂಶೋಧನೆ ಮತ್ತುಅಧ್ಯಯನದ ರೂಪುರೇಷೆಗಳನ್ನು ಮತ್ತು ವಿಭಿನ್ನ ಪರಂಪರೆಯನ್ನು ಹುಟ್ಟು ಹಾಕಿಹೊಸ ಆಲೋಚನಾ ದಿಕ್ಕನ್ನುತಂದ ಪ್ರೊ॥ ಎಸ್.ಕೆ. ರಾಮಚಂದ್ರರಾಯರುತಮ್ಮ 81ನೇ ವಯಸ್ಸಿನಲ್ಲಿ, 2ನೇ ಫೆಬ್ರವರಿ 2006ರಂದು ಇಹಲೋಕ ತ್ಯಜಿಸುತ್ತಾರೆ. ಈ ವರ್ಷ 2024 ಪ್ರೊ॥ ರಾಮಚಂದ್ರರಾಯರ ಜನ್ಮ ಶತಮಾನೋತ್ಸವ ವಾಗಿದ್ದು, ಈ ಸಂದರ್ಭದಲ್ಲಿಅವರ ಸ್ಮರಣಾರ್ಥ ಈ ಅಕ್ಷರ ನಮನ.

**(ಡಾ॥ ಎಸ್.ಸಿ. ಶರ್ಮ)**
**ಸಂಗೀತಗಾರರು ಮತ್ತು ಸಂಗೀತಜ್ಞರು**

# Sri Rama Lalitha Kala Mandira (R)

No 5, 9th Main Road, Banashankari 2nd Stage, Bangalore - 70

Estd. 1955

Website - www.srlkmandira.org
Email - srlkmandira@gmail.com

## Annual Spring Music Festival 2025
## 2nd to 9th February at 5:30pm

### Sunday - 2nd Feb, 2025

| | |
|---|---|
| Trichur Brothers (Vid. Srikrishna Mohan and Vid. Ramkumar Mohan) | Vocal Duet |
| Vid. Sayee Rakshith | Violin |
| Vid. Praveen Sparsh | Mridanga |
| Vid. Chandrasekara Sharma | Ghata |

### Monday - 3rd February, 2025

| | |
|---|---|
| Vid. Aishwarya Vidya Raghunath | Vocal |
| Vid. R.K. Shriramkumar | Violin |
| Vid. K.U. Jayachandra Rao | Mridanga |
| Vid. N. Guruprasad | Ghata |

### Tuesday - 4th February, 2025

| | |
|---|---|
| Vid. Amit Nadig | Flute |
| Vid. B.C. Manjunath | Mridanga |
| Vid. G. Guruprasanna | Khanjira |
| Vid. B.R. Somashekar Jois | Konnakol |

### Wednesday - 5th February, 2025

| | |
|---|---|
| Bangalore Brothers (Vid. M.B. Hariharan and Vid. S. Ashok) | Vocal Duet |
| Vid. Mysore V. Srikanth | Violin |
| Vid. Tumkur B. Ravishankar | Mridanga |
| Vid. Vyasa Vittala | Khanjira |

### Thursday - 6th February, 2025

Musical discourse on "Karnataka Haridasas"

| | |
|---|---|
| Vid.Vishakha Hari | Vocal/ Harikatha |
| Vid. Mattur Srinidhi | Violin |
| Vid. Anoor Ananthakrishna Sharma | Mridanga |
| Vid. Sukanya Ramgopal | Ghata |

### Friday - 7th February, 2025

| | |
|---|---|
| Vid. Ramakrishnan Murthy | Vocal |
| Vid. L. Ramakrishnan | Violin |
| Vid. Delhi Sairam | Mridanga |
| Vid. Giridhar Udupa | Ghata |

### Saturday - 8th February, 2025

| | |
|---|---|
| Vid. Anahita and Vid. Apoorva | Vocal Duet |
| Vid. Charulatha Ramanujam | Violin |
| Vid. H.S. Sudhindra | Mridanga |
| Vid. Omkar Rao | Ghata |

### Sunday - 11th February, 2025

| | |
|---|---|
| Vid. Jayanthi Kumaresh | Veena |
| Vid. K.U. Jayachandra Rao | Mridanga |
| Vid. Giridhar Udupa | Ghata |

## All Are Welcome

(First 5 rows are reserved seating)

### Venue : The Bengaluru Gayana Samaja

We request all rasikas to support and contribute generously to the Mandira's efforts in bringing to you premium quality carnatic music and making this festival a grand success.

**Voluntary donations are accepted and are exempted under section 80G of I.T Act**

40908461915798@cnrb


**For Donations through UPI, Please scan the QR code**

***In Loving memory of Vid. G.V. Krishna Prasad***

**Best Wishes from :**

# ಪರಿಮಳ ಮುದ್ರಣಾಲಯ

## ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್



**ನಂ. 2/1, 'ಎ' ಕ್ರಾಸ್, ಮೈಸೂರು ರಸ್ತೆ, ಬೆಂಗಳೂರು–560 026**

**ದೂ. : 080–26606061. ಮೊ. : 9448775589**

***Veena Krishnamurthy***
**Davalagiri**

**Mob. : 9886080587**
**Ph. : 080-26673909**



# MAGADI MUSICALS

***(Veene Ranganna & Sons) Since 1928***

**Saraswathi Veena Makers**
**All Musicals Instruments Sales & Service**

**No. 1640/25-1, Lalitha Complex, 80 Feet Road, 17th Main**
**BSK 1st Stage, Srinivasanagar, Bangalore-560 050**
**Website : www.magadimusicals.com**

**Best Wishes from :**

# Sri K.N. Ananthramiah


## ex President

## BTM Cultural Academy, Bangalore-560 076



*With Best Wishes From*

**Tel. : 080-26500870**
**26629216**
**Mob. : 9341288711**



# KARNATAKA KALASHREE

***GOTTUVADYAM VIDUSHI***
***USHA RAMAMOORTHY***

**"Jupiter Nivas" # Old No. 4, New No. 27**
**Market Road, Nettakallapa Circle**
**Basavanagudi, Bengalore-560 004**
**E-mail : krushavy@rediffmail.com**

*With Best Wishes From*

**Prop. : MANOHAR**

**Ph. : 26767003**
**Mobile : 9620014090**

## TULSI JEWELLERY WORKS



### A/C SHOWROOM

**MFRS. OF GOLD, SILVER, DIAMOND**
**& 916 KDM JEWELLERY**



**16/3, 1st Main Road, N.R. Colony,**
**BANGALORE-560 019**



*With Best Compliments From :*

**Mobile : 98450 13444**
**Phone : 080-26764534**

**K. KRISHNA BHAT**

# BHAT'S CATERING CENTRE

**We Undertake Catering (North & South Indian)**
**for Marriages, Birthday & all occasions**

Re : # 13, 9th Cross, Bull Temple Road,
Near Mookambika School
N.R. Colony, Bangalore-560 019

*With Best Wishes From*



**Sri S.S. PRASAD**

**AND**

**Smt. SHYLA PRASAD**



"ARADHANA APARTMENT"

No. 753, ( 3st Floor) 33rd 'A' Cross, 9th Main, 4th Block,

Jayanagar, Bangalore-560 011

Phone : 080-26643979

*With Best Wishes From*


Mrudanga Vidwan

M.G. GOPALAKRISHNAN

***Retd. Admin. officer, Finance, BHEL-EDN, B'lore-26***

***Mridangam Vidwan***

***Mobile : 9901421208, 6363613837***





# LAYA VINYASA

**The School for learning Mridangam**

Prestige Falcon City Apartments, Next to Metro Train Station,
Konanakunte Cross, Kanakapura Main Road,
Bangalore-560 062. Mobile : 9901421208, 6363513837
Email : mggopalakrishnan2808@gmail.com

*With Best Compliments From :*

**Girish D. Kulkarni**
**& Radhika Girish**

# POWERTRON ENINEERING SERVICES

***Mfr's Solar Power Plants,***
***UPS, Inverters, Batteries, Stabilisers,Transformers***

No. 39,/2-7, Kalyani Garden, (N.R. Colony), BSK 1st Stage, Bangalore-560 050
Tel. : +91 98453 40636, 96635 48168, 99455 67098, 92434 21271, 98801 02939
E-mail : powertron.engineering@gmail.com
Visit US @ www.powertronindia.in

*With Best Compliments From :*

# ಹೊಯ್ಸಳ ಕರ್ನಾಟಕ ಸಂಘ (ರಿ.)



**3ನೇ ಅಡ್ಡರಸ್ತೆ, ಹೊಂಬೇಗೌಡನಗರ,**
**ಬೆಂಗಳೂರು–560 027**
**ದೂರವಾಣಿ : 2227 411**

*With Best Wishes From*

# Tejas Hitech Building Solutions

***Do you have a space in your terrace or farm?***
***We can build a bome / Room which can be used for renting out, game room, gym, home-theater etc,***
***Specialize in : Readymade Cement Walls***
***Fast-track Construction***
***False Ceiling***
***Paintin - Texture / Royal***

**Contact : Mr. Sumanth Ph : 974322000**
**Email : tejashbs2018@gmail.com**
**For further information please visit : www.tejashitech.in**

*With Best Wishes From*

# A.N. UMA SHANKAR

**Mob. : + 9180 26674831**
**+ 91 94484 11288**
**email : sreenivasacoffee@gmail.com**

**ಶ್ರೀನಿವಾಸ ಕಾಫಿ**

# SREENIVASA COFFEE DEPOT

**# 3, Dr. D.V.G. Road, Basavangudi, Bengaluru-560 004.**
**Karnataka-India**

*Best Wishes !!!*

## BANGALORE GAYANA SAMAJA

**We Thank you**
**For**
**Regaling us with**
**Beautiful Concerts**
**Lectures &**
**Events**

*From*
*Jaya Ramesh, Bengaluru*

# ultrafilter (india) pvt.ltd.


(An ISO 9001 - 2008 Certified Company)

Pure and worldwide

ultrafilter international

Manufacturer of High Technology Industrial and
Process Filters, Dryers and Condensate Management Systems





Blower Reactivated Air Dryers


Desiccant Air Dryer


## Our Products Range


- High Efficiency Oil removal filters for Compressed Air & Gas
- Process Gas / Liquid Filters
- Natural gas filters
- Adsorption Dryers with dew point up to -80℃
- Refrigerated Dryers with Pressure dew point of +3°C
- Water Treatment systems using hollow fiber Membranes
- Filters with Manual / automatic backwash arrangement
- Moisture Separators and Condensate drains for compressed air lines
- Air-Cooled / Water cooled After coolers
- Water Chiller


Water Chiller


Process Filters


Industrial Filters


LDO Kits


Natural Gas Filters


Auto Backwash Filtration System

Find us on Facebook http://www.facebook.com/ultrafilterindia86

+91 - 080 - 4142 9900, 2783 2051
+91 - 080 - 4142 9903
info@ultrafilterindia.com
www.ultrafilterindia.com

**Regd. Office & Works**
Plot No. 70, Bommasandra Industrial Area
**Bangalore** - 560 099, Karnataka. INDIA

**Branch Offices:**
Bangalore | Orissa | Chennai |Secunderabad | Delhi | Pune | Mumbai | Baroda

**With Best Compliments From :**



# N M H

# NEW MODERN HOTEL

**A.N. Krishna Rao Road, Visveswarapuram**
**(Near Minerva Circle), BANGALORE - 560 004.**

Phone : 080-26612625, 26612610

Mobile : 9972021048

E-mail : nmhhotel_res@yahoo.com

booking@newmodernhotel.com

Website : www.newmodernhotel.com

*With Best Wishes From*

# GOWRISHANKAR AND COMPANY



**Unit 2, 26, 1st Floor, 16th Cross, 18th Main,**
**5th Phase J.P. Nagar, Bangalore-560 078.**
**TEL : 080 26597872.**
**Mob: +91 98450 36108,  98867 01933**
**Email : arakere.shankar@gmail.com**
**a.gowrishankar@arikshankar.com**
**Website : www.gowrishankarndco.in**

**With Best Compliments From :**

**Tel : 080-2660 1657**
**Cell : 98440 95225**

# M.R. Srinivasan
# M.R. Rohith

# Kaiser-i-Hind Silks

**DEALERS IN**

0 Pure Kanchipuram Silk Sarees
(6 yards and 9 yards)
0 Pure Silk Dhoties different varieties
0 Cotton Dhoties different Varieties
0 Silk Pavada



**# 191/2, Shankar Mutt Road,**
**5th Main Road**
**Chamarajpet**
**BANGALORE-560 018**



Timings : 10.30 am. to 8.30 p.m. (Mon - Sat)
Sunday : 10.30 a.m. to 3.30 p.m
www.kaiserihind.com

**With Best Compliments From :**

# S.R. VASUDEVA RAO WISHING THE CONFERENCE A GREAT SUCEESS

*With Best Wishes From*

# S. SRINIVAS
# Director

# AUM Infotech Pvt. Ltd.

**Digital Advertising**
**Information Solutions with**
**Web based software for content creation,**
**broadcast and monitoring**

- ♦ **Indoor LED displays (pitch 2.5mm to 22mm)**
- ♦ **Outdoor LED displays pitch 4mm to 22mm**
- ♦ **Standee LCD displays**
- ♦ **Customized LED / LCD displays**

Aum Infotech Pvt. Ltd.

**# Y 122, Sunrise Plaza, 16th Main Road**
**3rd Block, Rajajinagar, Bangalore-560 010**
**Mobile : 79454 76196, 94490 61175**

*With Best Wishes From*

# ಬಸವನಗುಡಿ ಸಹಕಾರ ಸಂಘ ನಿಯಮಿತ

ನಂ.37, 2ನೇ ಮಹಡಿ, ಬಿ.ಸಿ.ಎಸ್. ವಾಣಿಜ್ಯ ಸಂಕೀರ್ಣ,
ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು–04

**ಆಡಳಿತ ಮಂಡಳಿಯ ಸದಸ್ಯರುಗಳು**

| ಕ್ರ.ಸಂ. | ಹೆಸರು | ಸ್ಥಾನಮಾನ |
|---|---|---|
| 1. | ಶ್ರೀ ಎಂ. ರಾಜು | ಅಧ್ಯಕ್ಷರು |
| 2. | ಶ್ರೀ ಜಿ.ಎನ್. ವೆಂಕಟರಾಮನ್ | ಉಪಾಧ್ಯಕ್ಷರು |
| 3. | ಡಾ॥ ಟಿ.ಪಿ. ಯೋಗ | ಸ.ಲೆ.ಪ. |
| 4. | ಶ್ರೀ ಚಂದ್ರಶೇಖರ್ | ನಿರ್ದೇಶಕರು |
| 5. | ಶ್ರೀ ಹುಚ್ಚಯ್ಯ | ನಿರ್ದೇಶಕರು |
| 6. | ಶ್ರೀ ಅಂದಾನಪ್ಪ ಬಿ. | ನಿರ್ದೇಶಕರು |
| 7. | ಶ್ರೀ ಮರಿಮಲ್ಲಯ್ಯ | ನಿರ್ದೇಶಕರು |
| 8. | ಶ್ರೀ ಎಂ. ವೆಂಕಟೇಶ್ | ನಿರ್ದೇಶಕರು |
| 9. | ಶ್ರೀ ಶ್ರೀಧರ್ ಎಂ.ಪಿ. | ನಿರ್ದೇಶಕರು |
| 10. | ಶ್ರೀಮತಿ ಅನುರಾಧ ಚಂದ್ರಶೇಖರ್ | ನಿರ್ದೇಶಕರು |
| 11. | ಶ್ರೀಮತಿ ಮಾಲಿನಿ ಎನ್. | ನಿರ್ದೇಶಕರು |
| 12. | ಲೋಕೇಶ್ ಎ. | ನಿರ್ದೇಶಕರು |
| 13. | ಶ್ರೀ ಎಲ್. ಕೃಷ್ಣಮೂರ್ತಿ | ಸರ್ಕಾರದ ನಾಮ ನಿರ್ದೇಶಿತ ಸದಸ್ಯರು |
| 14. | ಶ್ರೀ ನಾಗರಾಜು ಕೆ.ಎನ್. | ಪ್ರಧಾನ ವ್ಯವಸ್ಥಾಪಕರು (ಪ್ರಭಾರ) |

E-mail : basco.society1908@gmail.com
1. 080-26602333 / 8951641908 (Gandhi Bazar)
2. 080-26633240 (Jayanagar)
3. 080-26509791 ( N.R. Colony)